


ಅಪರಂಜಿ

ತ್ರೈ ನಗೆಯ ಕಾರಂಜಿ

☐ ಆನಂದ್ ☐ ನಳಿನೀಪ್ರಿಯ ☐ ಜಿ.ಎನ

☐ ಲೀಲಾಮಿರ್ಲೆ ☐ ಶುಭಾ

☐ ವಿ. ಜಿ. ಭಟ್ಟ ☐ ಸೂರಿ

☐ ಕಮಲಾ ರಾಮಸ್ವಾಮಿ ☐ ಸುನಂದಮ್ಮ

☐ ಹಾಲೇಶಿ ☐ ಗುಂಡೂರಾನಾ ☐

ಸಂಪ

ಬಿಡಿಪ್ರತಿ : ಸಂಚ

ಕೇವಲ ಒಂದೂವರೆ ರೂಪಾಯಿ ಮಾರ್ಚ್–1



(ತಿಳಿನಗೆಯ ಕಾರಂಜಿ)

ಸಂಪುಟ ೪ | ಮಾರ್ಚ್ 1987 | ಸಂಚಿಕೆ ೬

ಬಿಡಿ ಪ್ರತಿ :—ಕೇವಲ ಒಂದೂವರೆ ರೂಪಾಯಿ
ವಾರ್ಷಿಕ ಚಂದಾ   ರೂ. 15/-
ಆಜೀವ ಚಂದಾ : ರೂ. 150/-
ಪೋಷಕರು   ರೂ. 500/-

ಎರಡು ಮಾತು

ಭಾರತದ ಬಡ ರೈತನ ಭಾಗ್ಯಕ್ಕೂ, ಕನ್ನಡ ಪತ್ರಿಕೆಗಳ ಆರ್ಥಿಕ ಸ್ಥಿತಿಗೂ ಒಂದು ಬಗೆಯ ಸಾಮ್ಯವಿದೆ. ಹಾಗಾಗಿ IRDP ಯನ್ನು ಕನ್ನಡ ಪತ್ರಿಕೆಗಳಿಗೂ ಏಕೆ ವಿಸ್ತರಿಸಬಾರದು ಎಂಬ ಒಂದು School of thought ಇದೆ. ಇದು ನನ ಸಾಗುವವರೆಗೂ, ಅಭಿಮಾನಿ ಓದುಗರ ಪ್ರೋತ್ಸಾಹ ಒತ್ತಾಸೆಯೇ ಅಪರಂಜಿಗೆ ಶ್ರೀರಕ್ಷೆ. ಇಲ್ಲಿನ ಬರಹಗಳು ಮಂದಹಾಸ ಮೂಡಿಸಿದ್ದರೆ, ನಿಮ್ಮ ಮಿತ್ರರಿಗೂ ಅಪರಂಜಿಯನ್ನು ಪರಿಚಯಿಸಿ.

ಹೊಸ ಪೀಳಿಗೆಯ ನಗೆ ಲೇಖಕ/ಲೇಖಕಿಯರಿಗೆ ಸದಾ ಸ್ವಾಗತ. ನಗೆಯ ಹೊದಿಕೆಯ ಮರೆಯಲ್ಲಿ ತಿಳಿವಿನ ಅಂಶ ಇರಬೇಕಾದದ್ದು ಅಗತ್ಯ. ಹೇಗಿದ್ದರೂ ಅಪರಂಜಿ 'ತಿಳಿ'ನಗೆಯ ಕಾರಂಜಿ ಅಲ್ಲವೇ,

ಶಿವಕುಮಾರ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು

ಅಪರಂಜಿ ಕಾರ್ಯಾಲಯ :
36, 6ನೇ ಮುಖ್ಯ ರಸ್ತೆ,
ಮಲ್ಲೇಶ್ವರಂ
ಬೆಂಗಳೂರು-560 003

ಸಂಚಿಕೆಯಲ್ಲಿ.......

ವ್ಯಂಗ್ಯ ಚಿತ್ರಗಳು ಅಶ್ವಥ್

ಮುದ್ರಣ ಇಂಪ್ರೆಷನ್ಸ್, ಬೆಂಗಳೂರು-3 ದೂರವಾಣಿ : 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ–೪ ಮಾರ್ಚ್–೧೯೮೭ ಸಂಚಿಕೆ–೬

ಮುಂದಿರುವುದು ಅಮೃತವಾದ ಬ್ರಹ್ಮ. ಹಿಂದೆ, ಎಡ, ಬಲ, ಮೇಲೆ, ಕೆಳಗೆ ಆವರಿಸಿರುವುದು ಬ್ರಹ್ಮವೇ.

—ಮುಂಡಕ

ಬ್ರಹ್ಮವು ಸರ್ವವ್ಯಾಪಿ ಎಂದು ಉಪನಿಷತ್ತು ಹೇಳುತ್ತದೆ. ಅದೇ ಮಾತನು ಮುಂದುವರಿಸಿ ಹೀಗೆನ್ನುತ್ತದೆ :

ಒಂದು ಮರದಲ್ಲಿ ಸದಾಜೊತೆಗಿರುವ, ಮಿತ್ರರಾದ ಎರಡು ಪಕ್ಷಿಗಳಿವೆ. ಅದರಲ್ಲೊಂದು ಸವಿಯಾದ ಹಣ್ಣನ್ನು ತಿನ್ನುತ್ತದೆ ; ಇನ್ನೊಂದು ತಿನ್ನದೆ ಸಾಕ್ಷಿಯಾಗಿ ನೋಡುತ್ತಿದೆ.

ತಾನು ಸರ್ವವೂ ಆಗಿರುವೆನೆಂಬ ಅನುಭವವನ್ನು ಪಡೆದ ಜ್ಞಾನಿಗಳು ಹೇಳಿದ ಮಾತಿದು. ಅವರಿಗೆ ಅನಂತ ನಮಸ್ಕಾರಗಳು.

ಈಗಲಾದರೋ ಸಮಸ್ಯೆ ಎಂಬ ವೃಕ್ಷಗಳು ಸುತ್ತಮುತ್ತಲೂ, ಎತ್ತೆತ್ತಲೂ ಬೆಳೆದಿವೆ. ಅವುಗಳಲ್ಲಿ ಹಣ್ಣನ್ನು ತಿನ್ನಬೇಕೆಂದು ಎರಡು ಪಕ್ಷಿಗಳು ಸರ್ವದಾ ಕಿತ್ತಾಡುತ್ತಿವೆ. ಒಂದು ಕಡೆ ಅಧಿಕಾರ, ಇನ್ನೊಂದು ಕಡೆ ಭಯೋತ್ಪಾದನೆ. ಎರಡೂ ಹಣ್ಣನ್ನು ತಿನ್ನಲು ಕಿತ್ತಾಡುತ್ತಿವೆ. ಅದರ ಫಲವನ್ನು ಅನುಭವಿಸುವವರು ಮೂಕ ಸಾಕ್ಷಿಗಳಾಗಿ ಬೆಪ್ಪಾಗಿ ಬಾಯಿ ತೆರೆದು, ಕಾತರ ಕಳವಳಗಳನ್ನು ಪಡುತ್ತಿರುವ ನಾವು. ಇದಕ್ಕೆ ಕೊನೆಯಿಲ್ಲವೇ ? ಆರಂಭವಾದದ್ದು ಕೊನೆಗೊಳ್ಳಲೇ ಬೇಕು. ಆದರೆ ಕರ್ಮ ಮೊಟ್ಟೆ ಇಡುತ್ತದಂತೆ.

ಕಳೆದ ಸಂವತ್ಸರ ಗಣದ ಕಡೇ ಬೀಸಿಕೆ ಮುಗಿಯಿತು, ಹೊಸ ಸಂವತ್ಸರವೇ ಹೊಸದನ್ನು ಖಂಡಿತವಾಗಿ ತಾ ಎಂದು ಅಪರಂಜಿ................ ಕರೆಯನ್ನು ಇತ್ತಿದ್ದಾಳೆ !

ಅಪರಂಜಿ ಕಿಡಿ

— ಆನಂದ್

ಭಾರತದ ಹೆಂಗಸರು ತಮ್ಮ ಕಾಲ ಮೇಲೆ ನಿಲ್ಲುವಂತೆ ಮಾಡಬೇಕು.

—ಶ್ರೀ ರಾಜೀವ ಗಾಂಧಿ

ಹೌದು, ನಮ್ಮ ಕಾಲನ್ನು ಮೆಟ್ಟಿ ನಿಂತಿದಾರೆ ಈಗ ಅಂತ ಕೆಲವು ಗಂಡಂದಿರು ಕುಹಕವಾಡಿದರಂತೆ !

* * *

ನೀರು ನೈರ್ಮಲ್ಯಕ್ಕೆ ಅಗ್ಗದ ತಂತ್ರ ಅಗತ್ಯ.

—ಪತ್ರಿಕೆ

ಅಗ್ಗದ ನೀರು, ಮುಗ್ಗಿದ ವಾಸನೆ !

* * *

ನ್ಯಾರೋ ಗೇಜ್ ರದ್ದು ಮಾಡಿದರೆ ಆಮರಣಾಂತ ಉಪವಾಸ.

—ಪತ್ರಿಕೆಯಲ್ಲಿ ಬೆದರಿಕೆ

ಛೆ, ಇದರಲ್ಲಿ Narrow ಮನೋಭಾವ ಇರಬಾರದು !

* * *

ಕೈ ಲಂಚ ಎಂಬ ವಿಚಿತ್ರ ಹೆಸರಿನ ಊರು ಪಂಚಾಯತ್ ಚುನಾವಣೆಗಳಲ್ಲಿ ಪ್ರಸಿದ್ಧಿಯಾಯಿತು !

—ಪತ್ರಿಕೆ

ಅದನ್ನು ರಾಜ್ಯದ ರಾಜಧಾನಿಯನ್ನಾಗಿ ಮಾಡುತ್ತಾರೆಂಬುದು ಸುಳ್ಳಂತೆ !

* * *

ವಿಶ್ವಕಪ್ ಬಳಿಕ ಇಮ್ರಾನ್ ನಿವೃತ್ತಿ

—ಸುದ್ದಿ

ಭಾರತದ ಆಟಗಾರರು ಹೆಲ್ಮೆಟ್ ಮುಟ್ಟಿ, ನಸುನಕ್ಕರಂತೆ !

* * *

ಗೋವಾದ ಬಿಕ್ಕಟ್ಟು ಪರಿಹಾರಕ್ಕೆ ಕೇಂದ್ರದಿಂದ ಶ್ರೀ ಪಾಣಿಗ್ರಹಿ ಆಗಮನ.

—ಪತ್ರಿಕೆ

ಸೂಕ್ತ ಹೆಸರಿನವರನ್ನೇ ಕಳಿಸಿದ್ದಾರೆ !

* * *

ಮಂಡಲ ಪಂಚಾಯಿತಿ ಚುನಾವಣೆ – ಅತ್ತೆ, ಸೊಸೆ ನಡುವೆ ಸ್ಪರ್ಧೆ.

—ಸುದ್ದಿ

ಈಗ ಯಾರ ಕಾಲವೋ ಕಾದು ನೋಡಬೇಕು !

* * *

ವಿಶ್ವನಾಥ ಪ್ರತಾಪಸಿಂಗ್ ರಕ್ಷಣಾ ಮಂತ್ರಿ.

—ಸುದ್ದಿ

ಅವರ ಪ್ರತಾಪದಿಂದ ಪಾಕ್ ಹಿಂಜರಿಯಲಿ !

* * *

ಭಾರತ ಪಾಕಿಸ್ತಾನ ಪಂದ್ಯ ನೋಡಲು ಜಿಯಾ ಅವರ ಇಚ್ಛೆ.

—ಪತ್ರಿಕೆ

ನಮಗೂ ಅದೇ ಆಸೆ ಅಂತ ರೇಗನ್ ನಕ್ಕರಂತೆ !

* * *

ಸದನದಲ್ಲಿ ಕೇಳಿಸಿದ್ದು.

ದಿನಪತ್ರಿಕೆ ಶೀರ್ಷಿಕೆ

ಆ ಗಲಾಟೆಯಲ್ಲಿ ಏನಾದರೂ ಕೇಳಿಸಿದ್ದೇ ಆಶ್ಚರ್ಯ !

ಬೆಂಗಳೂರು ಇಂದು-೧೨

—ನಳಿನೀಪ್ರಿಯ

ಅಂತರಾತ್ಮನ ದನಿ

"ಅಂತರಾತ್ಮನ ದನಿ ಕೇಳಿಸಿಕೊಳ್ಳೋದನ್ನ ಕಲಿತ್ಕೋಬೇಕು ಕಣೋ, ಎಲ್ಲಾ ತೊಂದರೆಗಳೂ ತಾನಾಗಿಯೇ ಮಾಯವಾಗುತ್ವೆ" ಅಂದ ಕಿರಣ್. ಕಿರಣ್ ನಮ್ಮ ಚಿಕ್ಕತ್ತೆ ಮಗ. ಪೂನಾದಲ್ಲಿ ವಾಸ. ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದ.

"ಪೂನಾದ ಹತ್ತಿರ ಒಂದು ಆಶ್ರಮ ಇದೆ. ಅವರ ಪ್ರಕಾರ ಬೆಳಗ್ಗೆ ಹತ್ತು ನಿಮಿಷ ಶಾಂತ ಮನಸ್ಸಿನಿಂದ ಕೂತು ಧ್ಯಾನಿಸಿದರೆ, ಅಂತರಾತ್ಮನ ದನಿ ಸ್ಪಷ್ಟವಾಗಿ ಕೇಳಿಸುತ್ತದಂತೆ. ಆ ಧ್ವನಿಯ ಆಜ್ಞೆಯ ಪ್ರಕಾರ ನಡೆದುಕೊಂಡರೆ, ಯಾವ ವಿಧ ವಾದ ಮನಃಕ್ಲೇಶಗಳೂ ಇರೋದಿಲ್ಲ" ಅಂತ ಕಿರಣ್ ಬಹು ಉತ್ಸಾಹದಿಂದ ತನ್ನ ಅನುಭವಾನೆಲ್ಲಾ ವಿವರಿಸ್ದ.

ನಾನೂ ಸಂಸಾರವಂದಿಗ. ಸಹಜವಾಗಿಯೇ ದಿನ ಬೆಳಗಾದರೆ, ನೂರೆಂಟು ತಾಪ ತ್ರಯ. ಒಂದು ಕೆಲಸ ಮಾಡುಕ್ಕೆ ಹೋದರೆ, ಒಂಭತ್ತು ಎಡವಟ್ಟಾಗಿರುತ್ತೆ. ಅಂತರಾತ್ಮನ ಧ್ವನಿ ಕೇಳಿಸಿಕೊಂಡು, ನಿರ್ಯೋಚನೆಯಿಂದ ಕೆಲಸಗಳನ್ನ ಮಾಡೋ ಹಾಗದರೆ ಎಷ್ಟು ಚೆನ್ನ ಅಂತ ಒಳಗೊಳಗೇ ಆಶೆ ಹುಟ್ಟಿತು.

ಸರಿ, ಶುಭಸ್ಯ ಶ್ರೀಘ್ರಂ ಅಂತ ಮಾರನೆಯ ದಿನ ಬೆಳಗ್ಗೇನೇ ಪ್ರಾರಂಭಿಸಿಬಿಟ್ಟೆ. ಆರು ಘಂಟೆಗೆ ಏಳೋ ಹೊತ್ತಿಗೆ, ಅಡಿಗೆ ಮನೆಯಲ್ಲಿ ಆಗ ತಾನೆ ಅರ್ಧಾಂಗಿ (ಮುಕ್ಕಾಲಂಗಿ ?) ಪಾತ್ರೆಗಳನ್ನು ಧಡಭಡಗುಟ್ಟಿಸುತ್ತಾ ಕೆಲಸಕ್ಕೆ ತೊಡಗಿದ್ದಳು. ಮುಖ ತೊಳೆದು ಚಾಪೆಯ ಮೇಲೆ ಕೂತೆ.

ಮೌನವಾಗಿ ಕಣ್ಣುಮುಚ್ಚಿ ಕುಳಿತದ್ದಾಯಿತು. 'ಶಾಂತ ಮನಃಸ್ಥಿತಿ' ಬರಿಸಿ ಕೊಳ್ಳೋದು ಹೇಗೆ ? ಸಕ್ಕರೆಗೆ ಮುತ್ತುವ ಇರುವೆಗಳಂತೆ, ಕೂತ ತಕ್ಷಣ ಸಾವಿರ ಯೋಚನೆಗಳು ತಲೆ ತಿನ್ನಲು ಶುರು. ಈ ಗಲಾಟೇಲಿ ಅಂತರಾತ್ಮನ ಧ್ವನಿ ಹೇಗೆ

ಕೇಳಿಸಬಲ್ಲುದು. ಇರಲಿ ದೇವರ ಧ್ಯಾನ ಪ್ರಯತ್ನಿಸೋಣ. ನಮ್ಮ ಮನೆ ದೇವರು ನಂಜುಂಡೇಶ್ವರ. ನಂಜುಂಡೇಶ್ವರನ ಬಗ್ಗೆ ಯೋಚನೆ ಹರಿಸುತ್ತಲೇ, ನಂಜನಗೂಡು, ಅಲ್ಲಿನ ರಸಬಾಳೆ, ನಂಜನಗೂಡು–ಮೈಸೂರುಗಳ ನಡುವೆ ಓಡಾಡುವ ಕಿಕ್ಕಿರಿದ ಟ್ಯಾಕ್ಸಿ, ಎಲ್ಲಾ ನೆನಪುಗಳೂ ಸುತ್ತಿಕೊಂಡು ಬಂದವು. ಛೇ ! ಇದೆಲ್ಲಾ ಪ್ರಯೋಜನವಿಲ್ಲ. ಮನಸ್ಸನ್ನು ಹದ್ದುಬಸ್ತಿನಲ್ಲಿಡಲೇಬೇಕು. ಮತ್ತೊಮ್ಮೆ ಪ್ರಯತ್ನಿಸಿದೆ. ತಾನಾಗಿಯೇ ಮನಸ್ಸು ತಿಳಿಯಾಗತೊಡಗಿತು. ಜೊತೆಗೆ ಒಂದು ವಿಧವಾದ ಆನಂದ. ಭಲೇ ! ಹೀಗೇ ಮುಂದುವರಿದರೆ, ಅಂತರಾತ್ಮ ಇರಲಿ, ಅದರಪ್ಪನ ಧ್ವನಿಯೂ ಕೇಳಿಸಬೇಕು !

ಉತ್ಸುಕನಾಗಿ ಕಾದೆ. ಅಡಿಗೆ ಮನೆಯಿಂದ ದೋಸೆ ಹುಯ್ದ "ಚುಂಯ್" ಶಬ್ದ ಕೇಳಿಸುತ್ತಿದ್ದಂತೆ, ಅಂತರಾತ್ಮನ ಧ್ವನಿಯೂ ಸ್ಪಷ್ಟವಾಗಿ ಕೇಳಿ ಬಂತು.

"ದೋಸೆಯ ಹಿಟ್ಟಿಗೆ ಉಪ್ಪು ಹಾಕಿಲ್ಲ. ಬೇಗ ಹೋಗಿ ಸರಿಪಡಿಸು"

ಅಡಿಗೆ ಮನೆಗೆ ದೌಡಾಯಿಸಿ, ಹಿಟ್ಟಿನ ರುಚಿ ನೋಡಿದೆ. ಉಪ್ಪೇ ಇರಲಿಲ್ಲ. ಅಂತರಾತ್ಮನ ಸಲಹೆ ನಿಜಕ್ಕೂ ಉಪಯುಕ್ತ ಅಲ್ಲವೆ !

ಶಕುನದ ಶಾರದೆ

ಶಾರದೆ ನಮ್ಮ ಪಕ್ಕದ ಮನೆ ಹುಡುಗಿ. ಆಧುನಿಕ ತರುಣಿಯಾದರೂ ಶಕುನಗಳಲ್ಲಿ ಬಲು ನಂಬಿಕೆ. ರಾಹುಕಾಲ ಇದ್ದಾಗ ಜಪ್ಪಯ್ಯ ಅಂದರೂ ಯಾವ ಕೆಲಸಾನೂ ಶುರುಮಾಡುಲ್ಲ. ಸಂಗೀತದಲ್ಲಿ ಎಂ.ಎ ಮಾಡಿಕೊಂಡು, ಸದ್ಯಕ್ಕೆ ಕೆಲಸವೇನೂ ಇಲ್ಲದೆ ಮನೆಯಲ್ಲಿದ್ದಾಳೆ. ನಿನ್ನೆ ಶಾರದೆ ನಮ್ಮ ಮನೆಗೆ ಬಂದಿದ್ಲು. ನನ್ನ ಹೆಂಡ್ತೀ ಹತ್ರ ಮಾತುಕತೆ. ನಾನೂ ಅಲ್ಲೇ ಕೂತು ಕೇಳಿಸ್ಕೋತಾ ಇದ್ದೆ.

-- ಮೊನ್ನೆ ಏನಾಯ್ತು ಗೊತ್ತಾ ಆಂಟಿ. ಸಂಜೆ ಸ್ತ್ರೀಸಮಾಜಕ್ಕೆ ಹೋಗೋಣ ಅಂತ ಹೊರಟೆ. ಅರ್ಧ ದಾರಿ ಹೋಗೋ ಅಷ್ಟರಲ್ಲಿ ಬೆಕ್ಕು ಅಡ್ಡ ಬರಬೇಕೇ ? ನನಗೆ ಏನು ಮಾಡೋಕ್ಕೂ ತೋಚಲಿಲ್ಲ. ಆದದ್ದಾಗಲೀ ಅಂತ ಸಮಾಜಕ್ಕೆ ಹೊರಟೇ ಬಿಟ್ಟೆ. ಅವತ್ತು ಅಲ್ಲಿ ಸಂಗೀತದ ಎರಡನೇ ತರಗತಿಯ ಬಾಲಕಿಯರ ಪರೀಕ್ಷೆ. ಅಧ್ಯಾಪಕಿ ಬಂದಿರಲಿಲ್ಲವಂತೆ. ನನ್ನೇ ಕೇಳಿಕೊಂಡರು ಪರೀಕ್ಷೆ ಮಾಡೋಕ್ಕೆ. ಹತ್ತು ಹುಡುಗಿಯರ ಅಪಸ್ವರಗಳನ್ನು ಕೇಳಿ, ಮಾರ್ಕ್ಸ್ ಹಾಕಿ, ಮನೆಗೆ ಹಿಂತಿರು

ಗಿವೆ. ಏನೂ ಅನಾಹುತ ಆಗಲೇ ಇಲ್ಲ. ಬೆಕ್ಕು ಬಲಗಡೇ ಇಂದ ಎಡಕ್ಕೆ ಹೋದರೆ ಕೆಟ್ಟದ್ದೋ ಅಥವಾ ಎಡದಿಂದ ಬಲಕ್ಕೆ ಹೋಗಬೇಕೋ ?"

ನನಗೇನೋ ಈ ಶಕುನಗಳಲ್ಲಿ ನಂಬಿಕೆ ಇರಲಿಲ್ಲ. ಇದನ್ನು ಕೇಳಿದ ಮೇಲೆ.... ....

ಹನುಮಂತನಗರದಲ್ಲಿ ಹಾರಾಡುವ ತಟ್ಟೆ

ಹನುಮಂತನಗರದ ಹರೀಶ ಬಹಳ ನೊಂದು ಕೊಂಡಿದ್ದಾನೆ. ಅವನಿಗಾದ ಅನುಭವವನ್ನು ಯಾರೂ ನಂಬದಿರುವುದೇ ಈ ವ್ಯಥೆಗೆ ಕಾರಣ. ಅಂಥಾದ್ದೇನಾಯಿತು ಅವನಿಗೆ ಅಂತೀರಾ ? ಬನ್ನಿ, ಅವನ ಬಾಯಿಂದಲೇ ಕೇಳೋಣ.

"ಅವತ್ತು ಬೆಳಗ್ಗೆ ಐದು ಘಂಟೆಗೇ ಎದ್ದು ಶ್ರೀನಗರದ ಕಡೆಗೆ ವಾಕಿಂಗ್ ಹೊರಟಿದ್ದೆ. ಇನ್ನೂ ಕತ್ತಲು. ಮೇಲೆ ನೋಡಿದರೆ ಒಂದು ಪ್ರಕಾಶಮಾನವಾದ ತಟ್ಟೆಯಾಕಾರದ ವಸ್ತು ಆಕಾಶದಿಂದ ಕೆಳಕ್ಕಿಳಿಯಲು ಶುರು ಮಾಡಿತು. ನೋಡುತ್ತಿದ್ದಂತೆ ಪಕ್ಕದ ಆಟದ ಮೈದಾನಕ್ಕೆ ಇಳಿದ ಆ ಹಾರಾಡುವ ತಟ್ಟೆ ಪೂರಿಯಂತೆ ಎರಡು ಬದಿಯೂ ಉಬ್ಬಿದ್ದು, ಜಿಲೇಬಿಯಾಕಾರದ ಕಿಟಕಿಗಳಿದ್ದವು (ಹರೀಶ ಸ್ವಲ್ಪ ತಿಂಡಿಪೋತ !) ಬಾಗಿಲು ತೆರೆಯಿತು. ಅನ್ಯ ಗ್ರಹದ ಎರಡು ಜೀವಿಗಳು ಹೊರಬಂದವು. ಒಂದು ಮಿಡತೇನ ನೂರು ಪಟ್ಟು ದೊಡ್ಡದು ಮಾಡಿದರೆ ಹೇಗಿರುತ್ತೋ ಹಾಗಿದ್ದರು ಆ ಜೀವಿಗಳು. ಮಿಡತೆಗಳ ತರಹ ಹಾರಿಕೊಂಡು ನನ್ನ ಹತ್ತಿರಾನೇ ಬಂದು ನಿಂತರು. ನನಗೋ ಜಂಗಾ ಬಲವೇ ಉಡುಗಿಹೋಯ್ತು. ಕತ್ತಲು ಬೇರೆ. ಗಾಯತ್ರೀ ಜಪ ಪ್ರಾರಂಭಿಸಿದೆ. ಅದೇನು ಆಶ್ಚರ್ಯ ನೋಡಿ. ಆ ಜೀವಿಗಳ ಸಂಭಾಷಣೆ ಟೆಲಿಪತಿ ಮೂಲಕ ನೇರವಾಗಿ ಮನಸ್ಸಿನಿಂದ ಮನಸ್ಸಿಗೆ !

ಅವರು ಹೇಳಿದ್ದು: ನಾವು ಅಂತರ್ಗ್ರಹ ಸಂಚಾರಿಗಳು. ನಿಮ್ಮ ಭೂಮಿಯನ್ನು ಸುತ್ತುವ ಚಂದ್ರಗ್ರಹಕ್ಕೆಂದು ಹೊರಟಿದ್ದೆವು. ದಾರಿ ತಪ್ಪಿ ಇಲ್ಲಿಗೆ ಬಂದು ಬಿಟ್ಟಿದ್ದೇವೆ.

ನಾನು ಇಷ್ಟೆಲ್ಲಾ ಅಂತರ್ಗ್ರಹ ಚಾಲನೆ ಮಾಡುವ ಕೌಶಲ ಇದ್ದೂ ಸಹ ದಾರಿ ತಪ್ಪಿದ್ದು ಹೇಗೆ ?

ಅವರು : ನಮ್ಮ ಚಾಲನೆಯೆಲ್ಲಾ ಸ್ವಯಂ ಚಾಲಿತ ಕಂಪ್ಯೂಟರಿನಿಂದ.

ಚಂದ್ರನ ಮೇಲ್ಮೈಯ ಕೊರಕಲುಗಳ ಚಿತ್ರವನ್ನು ಅದಕ್ಕೆ ತೋರಿಸಿ, ಅಲ್ಲಿಗೆ ಯಾನ ಮಾಡಲು ತಿಳಿಸಿದ್ದೆವು. ಭೂಮಿಯ ಮೇಲೆ ಹಾಯ್ದು ಹೋಗುವಾಗ, ನಿಮ್ಮ ಊರಿನ ಚಿತ್ರ ಕಂಪ್ಯೂಟರಿಗೆ ಗಲಿಬಿಲಿಯನ್ನುಂಟುಮಾಡಿ, ಇಲ್ಲೇ ಇಳಿಸಿತು. ನಿಮ್ಮ ಊರಿನ ರಸ್ತೆಗಳಲ್ಲಿನ ಕೊರಕಲುಗಳಿಗೂ ಚಂದ್ರನ ಮೇಲ್ಮೈಗೂ ಬಹಳ ಸಾಮ್ಯವಿದೆ. ಅಂತರ್ಗ್ರಹ ಯಾತ್ರಿಗಳು ದಾರಿತಪ್ಪಿ ಇಲ್ಲಿಗೆ ಬರದಿರಬೇಕಾದರೆ, ಮೊದಲು ರಸ್ತೆಗಳಲ್ಲಿನ ಕೊರಕಲುಗಳನ್ನು ಮುಚ್ಚಿಸಿ. ಹಾಗಂತ ಹೇಳಿ ತಮ್ಮ ನೌಕೆಯನ್ನು ಹತ್ತಿ ಹಾರಿಹೋದರು.

ಮದುವೆ ಮನೆಯಲ್ಲಿ ಕೇಳಿದ್ದು

ಮೊನ್ನೆ ಕುಚಲಾಂಬದಲ್ಲಿ ಒಂದು ಮದುವೆಗೆ ಹೋಗಿದ್ದೆ. ವರ ಪೂಜೆಯ ಸಂಜೆ ವಧುವಿನ ಚಿಕ್ಕಪ್ಪಂದಿರು, ಎಲ್ಲರನ್ನೂ ಸ್ವಾಗತಿಸುತ್ತಿದ್ದರು. ಎಲ್ಲಾ ಹೊಸ ಮುಖಗಳು. ಲಕ್ಷಣವಾಗಿದ್ದ, ಒಬ್ಬ ಮಧ್ಯ ವಯಸ್ಕ ಹೆಂಗಸರೊಬ್ಬರು, ಒಳಗೆ ಬರುತ್ತಲೇ, ಸೊಗಸುಗಾರಪುಟ್ಟಸಾಮಿ ಚಿಕ್ಕಪ್ಪನೊಬ್ಬ ಮುನ್ನುಗ್ಗಿ

"ಬನ್ನಿ ಬನ್ನಿ ತಾವು ವಧುವಿನ ಸ್ನೇಹಿತರ ಕಡೆಯವರೇ?" ಅಂತ ಸ್ವಾಗತಿಸಿದ. ಆಕೆ ಸ್ವಲ್ಪ ಗಲಿಬಿಲಿಗೊಂಡು "ಇಲ್ಲ, ಇಲ್ಲ, ನಾನು ವರನ ತಾಯಿ" ಅಂದು ಬಿಡೋದೆ !

ನಂ ಕ್ಲಬ್ಬಿನಲ್ಲಿ

—ಆನಂದ್

ನಂ ಕ್ಲಬ್ಬಿನಲ್ಲಿ ಕೇಳಿದ್ದು

"ಅಲ್ಲ ಕಣೋ, ಕ. ತಿಪ್ಪಗುಂಡನ ಹಳ್ಳಿಯಲ್ಲಿ ಮಳೇನೇ ಇಲ್ಲ ಅಂತ ಗೋಳಾಡ್ತ ಇದಾರಲ್ಲ, ನನಗೆ ಒಂದು ಗ್ಯಾರಂಟಿ ಉಪಾಯ ಗೊತ್ತಿದೆ"

"ಏನೋ ಅದು ?"

"ಹಳ್ಳಿ ಹತ್ರಾನೇ ಒಂದು ದೊಡ್ಡ ಕ್ರಿಕೆಟ್ ಮ್ಯಾಚ್ ಏರ್ಪಾಡು ಮಾಡಿಬಿಟ್ರೆ ಸಾಕು, ಮೂರ ದಿನ ಭಾರೀ ಮಳೆ ಸುರಿಯುತ್ತೆ !

ಮೆದುಳು ಜ್ವರ

ಜಿ.ಎನ್.ಜಿ.

ಬಳ್ಳಾರಿ etc. ಗಳಲ್ಲಿ "ಮೆದುಳು ಜ್ವರ" ಬಾಧೆಯಿಂದ ಜನ ನರಳ್ತಿದಾರೆ, ಸಾಯ್ತಿದಾರೆ. ಈ ಜ್ವರ ಈ ಜಿಲ್ಲೆಗಳಲ್ಲೇ ಏಕೆ ? ಈ ಜಿಲ್ಲೆ ಜನಗಳಿಗೆ ಮಾತ್ರ ಮೆದುಳಿದೆಯೆ ? ಅವರ ಮೆದುಳುಗಳಿಗೇ ಏಕೆ ಈ ಆಕ್ರಮಣ ? ಮೆದುಳಿರೋ ಅವರಾದ್ರೂ ಸುಖವಾಗಿರಬೇಡವೇ ? ಮೆದುಳಿದ್ದವರು ಮಾತ್ರ ಸುಖವಾಗಿ ಇರ್ತಾರೆಯೇ ? ಸುಖವಾಗಿ ಇರೋದಕ್ಕೆ ಮೆದುಳು ಬೇಕೆ ? ಮೆದುಳಿದ್ದವರೆಲ್ಲಾ ಸುಖವಾಗಿದಾರೆಯೇ ? ಅದಿಲ್ಲದವರು ಸುಖವಾಗಿಲ್ಲವೆ ?

ಆ ಜಿಲ್ಲೆ ಜನಗಳಿಗೆ ಮಾತ್ರ ಮೆದುಳಿದೆ ಎಂದೆನೆ ? ಅಂದರೆ ? ಉಳಿದವರಿಗಿಲ್ಲ ಎಂತಲೆ ? ನಾನು ಹಾಗೆ ಎಂದೆನೆ ? ಇಲ್ಲವಲ್ಲ !

"ಸಾರ್ಕ್" ಗಲಾಟೇಲಿ ಬೆಂಗಳೂರಲ್ಲಿ Window dressing ನಡೆದಾಗ ಅಲ್ಲಿದ್ದ ಹಂದಿಗಳನ್ನ, ಬೇಡಾದ ಮಂದಿಗಳನ್ನ, ಸೊಳ್ಳೆಗಳನ್ನ ಸಾರಾಸಗಟಾಗಿ ಆ ಜಿಲ್ಲೆಗಳಿಗೆ ರವಾನಿಸಿದರೆ ? ರವಾನಿಸಬೇಕಾದ್ದು ಸ್ವಾಭಾವಿಕ. ಆದರೆ ಎಲ್ಲಿಗೆ ಎಂಬುದು ಯಕ್ಷ ಪ್ರಶ್ನೆ. ಬೀಗರೆದುರು ಬೀಗರು ಬೀಗಿತ್ತಿಯರು ನೆರೆ ಮನೆ ಒಡವೆ ಸೀರೇಲಿ ಮೆರೆದು ಮರ್ಯಾದೆ ಮುಚ್ಚಿಕೊಂಡು ಮದುವೆ ಮಾಡಿಕೊಡಲ್ವೆ ? ಇದು tradition. ಆಗಬೇಕಾದ್ದು. ಲೋಕ ಧರ್ಮ, ನೀತಿ.

ಈಗ ಬಂದಿರೋ ಪ್ರಶ್ನೆ ಅದಲ್ಲ. ತಲೆಗೆ ಸಂಬಂಧಪಟ್ಟಿದ್ದು. ಅಂದರೆ ತಲೆಗೆ ಸಂಬಂಧಪಟ್ಟ ಜ್ವರದ್ದು. ಈ ಜ್ವರದಲ್ಲಿ ವೈದ್ಯಕೀಯವಾಗಿ ಎರಡು ಬಗೆ. ಒಂದು ಮೆನೆಂಜಿಟಿಸ್. ಇನ್ನೊಂದು "ಎನ್ಸೆಫೆಲಿಟಿಸ್;" ಹಂದಿಜ್ವರ. ಕ್ಷಮಿಸಿ, ಮೆದುಳು ಜ್ವರ.

ಇವುಗಳಲ್ಲಿ ಮೆನೆಂಜಿಟಿಸ್ ಸೀನಿಯರ್. ತಲೆ ಅರ್ಥಾತ್ ಮೆದುಳನ್ನು ಆವರಿಸಿರೋ ಪೊರೇಲಿ ನೀರು ತುಂಬಿಕೊಂಡು ತಲೆ ಕೆಡಿಸೋ ಜ್ವರ. ಬಹಳ ಅಂಟು ಜಾಡ್ಯ. ಹಿಂದೆ ಈ ರೋಗ ಬಂದವರನ್ನು isolation camp ನಲ್ಲಿ ಇಡ್ತಾ ಇದ್ದರಂತೆ. ಈಗ ಹಾದಿಗೊಂದು ಬೀದಿಗೊಂದು ಮೆಡಿಕಲ್ ಕಾಲೇಜುಗಳಾಗಿರೋದ

ರಿಂದ case study ಗೆ ಡಿಸೆಕ್ಷನ್‌ಗೆ ಬೇಕೂಂತ ಊರಲ್ಲೇ ಇಟ್ಟುಕೊಂಡು ವೃದ್ಧಿ ಮಾಡ್ತಾ ಇದ್ದಾರಂತೆ. ಇದು ಭಯನಕವಾದ ಖಾಯಿಲೆ. ಪ್ರಾಣಾನೂ ಹೋಗ ಬಹುದು. ತಲೇನೂ ಕೆಡಬಹುದಂ.

ಈ "ಮೆನೆಂಜಿಟಿಸ್"ಗೆ ಏಕೆ ಇಂಗ್ಲಿಷ್ ಹೆಸರು ? ಈ "ಎನ್ಸೆಫಿಲಿಟಿಸ್"ಗೆ ಯಾಕೆ ಮೆದುಳು ಜ್ವರ ಎಂಬೋ ಅಭಿದಾನ ? ಡೈರೆಕ್ಟಾಗಿ ತಲೆಗೆ ತಟ್ಟೋ ಹಾಗೆ ಈ "ತಲೆಶಿರೋಭಾರ ?"

ಹೀಗೂ ಇರಬಹುದು. "ಮೆನೆಂಜಿಟಿಸ್" ನಾವು ದಾಸ್ಯದಲ್ಲಿ ಇದ್ದಾಗಲೇ, ಅಂದರೆ ಸ್ವಾತಂತ್ರ್ಯ ಬರೋದಿಕ್ಕೆ ಮೊದಲು, (ಈಗ ಬಂದಿದೆಯೇ ? ಬಂದಿದ್ದರೆ ಯಾರಿಗೆ ?) ಕಾಣಿಸಿಕೊಂಡಿದ್ದರಿಂದ ಆಗ ನಮ್ಮ ಮೆದುಳು ದಾಸ್ಯದಲ್ಲಿತ್ತೋ ಏನೋ (ಈಗಿಲ್ವೆ ?). (ಇದ್ದಿದ್ದರೆ–ಹೀಗೇಕೆ ? hero worship !) ಅಥವಾ ನಮ್ಮ ಮೆದು ಳಿಗೆ ಇದ್ದ ಬೆಲೆ ಅಷ್ಟರಲ್ಲೇ ಇತ್ತೋ ಏನೋ ? ಆದ್ದರಿಂದ ಹಾಗೆ ಕರೆದಿರಬಹುದು.

ಆ ಖಾಯಿಲೆಗೆ ಇರೋ ಇಂಗ್ಲಿಷ್ ಹೆಸರೇ ಇನ್ನೂ continue ಆಗಿ, ಕನ್ನ ಡಕ್ಕೆ ಆಗಿರೋ ಈ disgrace ನ ಕನ್ನಡ ಕಾವಲು ಸಮಿತಿ top priority ಕೊಟ್ಟು solve ಮಾಡಬೇಕಾದ್ದು ತುಂಬಾ essential ಉ.

ಅದೂ ಅಲ್ಲ ನನ್ನ point. ಹಾಲಿ ನಮ್ಮ ಈ "ಹಂದಿ ಜ್ವರ" ಕ್ಷಮಿಸಿ, "ಮೆದುಳು ಜ್ವರ" ಎಷ್ಟು ಜನಕ್ಕೆ ಮೆದುಳಿದೆ ಎಂಬುದನ್ನು ಸಾಬೀತು ಮಾಡುವಲ್ಲಿ ಪ್ರಯತ್ನಿಸಿದೆ. ಈ ಪ್ರಯತ್ನದಲ್ಲಿ ತನ್ನ ಸೇವೆ ಸಲ್ಲಿಸುತ್ತಿರೋ ಹಂದಿಗಳನ್ನ ಗುಂಡಿಕ್ಕಿ ಕೊಲ್ಲುವುದರ ಮೂಲಕ ಪುರಸ್ಕರಿಸುತ್ತಿರುವುದು ಕಿರಿಕಿರಿ ವಿಷಯ.

ಇವು ಯಾವೂ ಅಲ್ಲ ನನ್ನ point ಮೆದುಳು ಇರೋರಿಗೆಲ್ಲಾ ಒಂದು ರೀತಿ ಜ್ವರ ಬಾಧಿಸುತ್ತಲೇ ಇರುತ್ತದೆ ಎಂಬುದು ನನ್ನ ನಂಬಿಕೆ. ಏಕೆಂದರೆ ನನಗೆ ಯಾವ ಜ್ವರವೂ ಬಾಧಿಸುತ್ತಿಲ್ಲ. ನನಗೆಂದೂ ತಲೆ ಬಿಸಿಯಾಗೇ ಇಲ್ಲ.

ಅಂದ ಹಾಗೆ "encephal" ಎಂದರೆ inflammation of the brain ಅಂತ ನಿಘಂಟಿನ ಅರ್ಥ. ಅದಕ್ಕೆ ಹಂದೀನೇ ಬೇಕೆ ? ಪಂಜಾಬು, ಅಸ್ಸಾಂ, ಗೂರ್ಖಾಗಳು, ವೆಂಕಟಸ್ವಾಮಿ, etc. ಸಾಲದೆ ?

ಸಪ್ತ ಕುಲಪತಿಗಳಿಗೆ ಅವರವರ ರಾಷ್ಟ್ರದ್ದೇ ಆದ ಅನೇಕ ಸಮಸ್ಯೆಗಳು, ನಮ್ಮ

ಪ್ರಧಾನಿಗಳನ್ನೇ ತೆಗೆದುಕೊಳ್ಳಿ. ಜಯವರ್ಧನೆಯವರನ್ನೇ ತೆಗೆದುಕೊಳ್ಳಿ. ಅವರಿಗಿರೋ ಸಮಸ್ಯೆಗಳು ಸಾಲದೆ ? ಇದರಿಂದ ಅವರಿಗೇನು inflammation ಕಡಿಮೆಯಾಗಿದೆಯೆ ? ಅದಕ್ಕೆ ತಾನೆ ಬೆಂಗಳೂರಲ್ಲಿ ಸೇರಿದ್ದು ಸಾಲದೂ ಅಂತ ತಮ್ಮ ಹೆಂಡಂದಿರನ್ನೆಲ್ಲಾ ಬೇಲೂರಿಗೆ ಕಳಿಸಿ ಕಾದ ತಲೇನ ತಂಪು ಮಾಡಿಕೊಳ್ಳೋದಕ್ಕೆ ನಂದಿ ಬೆಟ್ಟಕ್ಕೆ ಹೋಗಿರಲಿಲ್ಲವೆ ?

ಬಳ್ಳಾರೀಲಿ "ಹಂದಿ ಕಾಟ" ಪಂಜಾಬಿನಲಿ "ಮಂದಿ" ಕಾಟ. ಹಂದೀನ shoot ಮಾಡಿದರೆ ಸಾಯುತ್ತವೆ. ಪಂಜಾಬಿನಲ್ಲಿ "ಮಂದೀನ" short ಮಾಡಿದರೆ retort ಮಾಡುತ್ತಾರೆ. ಆದ್ದರಿಂದ ಯಾವುದು ಭಯಾನಕವಾದ "ಮೆದುಳು ಜ್ವರ" ಎಂಬುದರ ತೀರ್ಮಾನ ನಿಮಗೆ ಬಿಟ್ಟ ವಿಷಯ.

ನನಗೆ ತೋಚೋದು ಇಷ್ಟು. ಎಲ್ಲರಿಗೂ ಒಂದೊಂದು ರೀತಿಯ "ಮೆದುಳು ಜ್ವರ"ವೇ. ಒಂದೊಂದು ರೀತಿಯ inflammation of the brain ಏ.

ಈ ಮೆದುಳು ಜ್ವರ ಯಾರಿಗಿಲ್ಲಾಂತೀನಿ ?

"ಚಿತಾದಹತಿ ದೇಹಮ್–ಚಿಂತಾದಹತಿ ಜೀವಿತಂ.



ಏನಂದ್ರೆ ಧೈರ್ಯವಾಗಿ ಉತ್ತರಕೊಡಿ ನನಗೆ ಹೆದರ್ಕೊಂಡಂಗೆ ಅಲ್ಲೂ ಹೆದರ್ಕೊಬೇಡಿ

ಅತಿಥಿ

—ಲೀಲಾ ಮಿರ್ಜೆ

ಮೈಸೂರಿನಿಂದ ಶಾಂತಿ ಕಾಗದ ಬರೆದಿದ್ದಳು. "ನನ್ನ ಸ್ನೇಹಿತೆ ಮೀನಾ ದೇಶಪಾಂಡೆ ಗೊತ್ತಲ್ಲಾ, ಅವಳ ಮಗ ಅನಿಲ್ ದಕ್ಷಿಣ ಭಾರತದ ಪ್ರವಾಸ ಮಾಡ್ತಾ, ಈಗ ಮೈಸೂರಿಗೆ ಬಂದಿದ್ದಾನೆ. ಇಲ್ಲಿಂದ ಬೆಂಗಳೂರಿಗೆ ಹೋಗ್ತಾನೆ. ನಿನ್ನ ವಿಳಾಸ ಕೊಟ್ಟಿದ್ದೇನೆ, ಎರಡು ಮೂರು ದಿನ ಇರ್ತಾನೆ. ಅಷ್ಟೆ. ಬೆಂಗಳೂರಿಗೆ ಇದು ಅವನ ಮೊದಲ ಭೇಟಿ. ತುಂಬ ಒಳ್ಳೆಯ ಹುಡುಗ ... ... ಇತ್ಯಾದಿ.

ಈ ಶಾಂತಿಯು ಹಣೆಬರಹವೇ ಇಷ್ಟು. ತಾನು ಇಲ್ಲದ್ದನ್ನು ತಲೆಗೆ ಕಟ್ಟಿ ಕೊಳ್ಳೋದಲ್ಲದೆ, ನನಗ್ಯಾಕೆ ಈ ಟೂರಿಸ್ಟನ್ನ ಗಂಟುಹಾಕಬೇಕು ಹೇಳಿ. ಅದ್ಯಾರೋ ಅವಳ ಸ್ನೇಹಿತೆ ಮೀನ, ಅದೂ ನನಗೆ ತಿಳಿಯದು. ಸರಿ, ಹೋಗ್ಲಿ ಅಂತ ಸುಮ್ಮ ನಾದೆ.

ಮುಂದಿನ ವಾರ ಅನಿಲ್ ದೇಶಪಾಂಡೆ ಬಂದಿಳಿದ. 24–25ರ ಹುಡುಗ. ನಯವಾದ ಮಾತುಕತೆ. ನಭ್ಯಸ್ಥ. ಹೋಗಲಿ, ಇಂತಹ ಅತಿಥಿಗಳನ್ನ ನೋಡಿಕೊಳ್ಳು ವುದು ಕಷ್ಟವಿಲ್ಲ ಎಂದುಕೊಂಡೆವು.

ಬೆಳಗಿನಿಂದ ಸಂಜೆಯ ತನಕ ಊರನ್ನೆಲ್ಲಾ ನೋಡಿಕೊಂಡು ಬಂದ ಅನಿಲ್.

ಮಾರನೆಯ ದಿನ ರಾತ್ರಿ ಅವನು ಪ್ರಯಾಣ ಮುಂದುವರಿಸಬೇಕಾಗಿತ್ತು. ಅಂದು ಮಧ್ಯಾಹ್ನ ಕಾಫಿ, ಟಿಫಿನ್ ಆಯಿತು.

"ಆಂಟಿ, ಬೆಂಗಳೂರು ತುಂಬಾ ಚೆನ್ನಾಗಿದೆ. ಹೂವಿನ ತೋಟಗಳಂತೂ ಕಣ್ಣಿಗೆ ಹಬ್ಬ, ನಿಮ್ಮ ಗಾರ್ಡನ್ನೂ ತುಂಬಾ ಚೆನ್ನಾಗಿದೆ" ಅಂದ

"ಹೌದು, ಇಲ್ಲಿಯ ಹವಕ್ಕೆ, ಗಿಡಗಳು ಚೆನ್ನಾಗಿ ಬೆಳೆಯುತ್ತವೆ" ಅಂದೆ,

"ಆಂಟಿ, ನಾನು ಹೋದ ಕಡೆ ಎಲ್ಲಾ ಫೋಟೋಗಳನ್ನು ತೆಗೆದುಕೊಳ್ಳುತ್ತಿ ದ್ದೇನೆ, ನಿಮ್ಮ ಅಭ್ಯಂತರವೇನೂ ಇಲ್ಲದಿದ್ದರೆ ನಿಮ್ಮ ಮನೆಯ ತೋಟದಲ್ಲೂ ಒಂದು

ಫೋಟೊ ತೆಗೆದುಕೊಳ್ಳಬಹುದೇ ?" ಎಂದು ಕ್ಯಾಮರಾವನ್ನು ಬ್ಯಾಗಿನಿಂದ ತೆಗೆಯುತ್ತಾ, ಹಿಂಜರಿಯುತ್ತಾ ಕೇಳಿದ ಅನಿಲ್.

"ಅದಕ್ಕೇನಪ್ಪಾ, ಧಾರಾಳವಾಗಿ" ಎಂದೆ.

ವಯಸ್ಸಾದ ನನ್ನಂತಹವರ ಫೋಟೊ ಹಿಡಿಯಲು ಯಾವ ಯುವಕರೂ ಆಸೆ ಪಟ್ಟಿರಲಿಲ್ಲ ! ದೊಡ್ಡವರೆಂದರೆ ಅದೆಷ್ಟು ಗೌರವ. ಪಾಪ, ನಮ್ಮ ಮನೇಲಿ ಎರಡು ದಿನ ಇದ್ದುದಕ್ಕೆ, ನನ್ನ ಚಿತ್ರ ತೆಗೆದುಕೊಳ್ಳಲು ಹೊರಟಿದ್ದ.

ನನ್ನ ಸೀರೆ ನೋಡಿಕೊಂಡೆ, ಪರವಾಗಿಲ್ಲ, ಫೋಟೋಲಿ ಸರಿಯಾಗಿ ಬರುತ್ತೆ ಅಂದುಕೊಂಡೆ. ಬೇಗ ತಲೆ ಸರಿಮಾಡಿಕೊಂಡೆ (ಹೊರಗೆ !).

ಇಬ್ಬರೂ ಹೊರಗೆ ಹೋದೆವು. ಅನಿಲ್ ಕ್ಯಾಮರಾದ ಎರಡು ಮೂರು ಗುಂಡಿಗಳನ್ನು ಅಡ್‌ಜಸ್ಟ್ ಮಾಡಿದ.

"ಆಂಟಿ, ನೀವು ಈ ಜಾಗದಲ್ಲೇ ನಿಂತ್ಕೋಳಿ. ನಾನು ಆ ಗಿಡದ ಹತ್ತಿರ ನಿಂತ್ಕೋತೀನಿ. ನೀವು ಇಲ್ಲೇ ನಿಂತು ಈ ಬಟನ್ ಅಮುಕಿ ಅಷ್ಟೆ, ತುಂಬ ಸುಲಭ" ಎಂದು ಹೇಳಿ ಕ್ಯಾಮರ ನನ್ನ ಕೈಗೆ ಕೊಟ್ಟು, ಗಿಡದ ಹತ್ತಿರ ಹೋಗಿ ನಿಂತ ಅನಿಲ್ ! !

ನಂ ಕ್ಲಬ್ಬಿನಲ್ಲಿ

—ಆನಂದ್

ನಂ ಕ್ಲಬ್ಬಿನಲ್ಲಿ ಒಂದು ಪದ್ಧತಿ. ಆ ವಾರದ ಮೀಟಿಂಗಿನಲ್ಲಿ, ಅದೇ ವಾರ ಯಾವ ಸದಸ್ಯರ ಹುಟ್ಟು ಹಬ್ಬವೋ ಅವರಿಗೆ ಎಲ್ಲರೂ ಶುಭ ಕೋರುವುದು, ಮೊನ್ನೆ ನಡೆದ ಸಭೇಲಿ ಅಧ್ಯಕ್ಷರು ಒಬ್ಬ ಗಣ್ಯ ಸದಸ್ಯರ ಹೆಸರು ಹೇಳಿದಾಗ, ಆ ಸದಸ್ಯರು ಸಭೆಯಲ್ಲಿ ಇರಲಿಲ್ಲ. ಅಧ್ಯಕ್ಷರು "ಈ ಗಣ್ಯ ಸದಸ್ಯರಿಗೆ Ex-parte ನಮ್ಮ ಶಭಾಶಯಗಳು" ಎಂದರು. ನಾವೆಲ್ಲ ಗೊಳ್ಳನೆ ನಕ್ಕೆವು. ಅಧ್ಯಕ್ಷರು ಒಬ್ಬ ಪ್ರಸಿದ್ಧ ವಕೀಲರು, ಅವರ ಕೋರ್ಟು ಭಾಷೆ ಸಂಜೆಗೂ ಹರಡಿತು !

15

ಒಂದು ಪ್ರಸಂಗ

—ಶುಭಾ

ಅವನಿಗೆ ಕಣ್ಣು ಬಿಟ್ಟಾಗಲೇ ಗೊತ್ತಾಯಿತು, ಏನೋ ಆಗಬಾರದ್ದು ಆಗಬಹುದು ಅಂತ. ಯಾವುದೋ ಅವ್ಯಕ್ತ ಭಯ ಅವನ ಮನಸ್ಸನ್ನ ಆವರಿಸಿತ್ತು. ಸುತ್ತ ನೋಡಿದ, ಯಾರೂ ಕಾಣಲಿಲ್ಲ. ಇದ್ದಕ್ಕಿದ್ದ ಹಾಗೇ ಬಾಗಿಲ ಸದ್ದಾಯಿತು. ಇಬ್ಬರು ಧಾಂಡಿಗರು—ಒಬ್ಬ ಧಾಂಡಿಗ, ಇನ್ನೊಬ್ಬಳು ಧಾಂಡಿಗಿ—ಒಳಗೆ ಬಂದರು. ಅವರ ಮುಖಗಳ ಮೇಲೆ ಒಂದು ತರಹ ವಿಕಾರವಾದ ನಗು ! ಅವನು ಭಯ ದಿಂದ ತತ್ತರಿಸಿದ ! ಕೂಗಲು ಬಾಯೇ ಬರಲಿಲ್ಲ. ಅನಾಮತ್ತಾಗಿ ಇಬ್ಬರೂ ಹತ್ತಿರ ಬಂದರು. ಧಾಂಡಿಗ ಅವನನ್ನು ಅನಾಯಾಸವಾಗಿ ಎತ್ತಿದ-ಇನ್ನೇನು ಮಾಡುತ್ತಾನೋ ಅಂತ ಅವನು ಹೋ ಅಂತ ಕೂಗಲು ಆರಂಭಿಸಿದ. ಈ ಹೆಂಗಸಾದರೂ ಸ್ವಲ್ಪ ದಯೆಯಿಂದ ಸಹಾಯ ಮಾಡಬಾರದೆ ? ಅವಳೂ ನಗುತ್ತ ಸುಮ್ಮನಿದ್ದಳು. ಕ್ರೌರ್ಯದ ಪರಮಾವಧಿ ಎಂಬಂತೆ ಇಬ್ಬರೂ ಸೇರಿ ಅವನನ್ನ ಇನ್ನೊಂದು ಕೋಣೆಗೆ ಕರೆದು ಒಯ್ದರು. ಇವನ ಕೂಗಾಟ ಕಿರಿಚಾಟಕ್ಕೆ ಯಾರೂ ಸೊಪ್ಪು ಹಾಕಲಿಲ್ಲ. ಧಾಂಡಿಗನ ಹಿಡಿತದಿಂದ ತಪ್ಪಿಸಿಕೊಳ್ಳಲು ಬಲವಾಗಿ ಯತ್ನ ಮಾಡಿದ. ಹೆಬ್ಬಾವಿನ ಹಿಡಿತದಿಂದ ಬಿಡುಗಡೆ ಸಿಗುತ್ತೆಯೇ ?

ಧಾಂಡಿಗನ ಜತೆ ಇದ್ದ ಹೆಂಗಸು, ಇವನ ಕಷ್ಟ ಸಾಲದೆಂಬಂತೆ ಕೈಯಲ್ಲಿ ಏನೋ ಹಿಡಿದು ತಂದಳು. ಬಲವಾದ ಕೈಗಳು ಅವನ ಕಾಲನ್ನು, ಕೈಯನ್ನು ಭದ್ರ ವಾಗಿ ಹಿಡಿದವು. ಭಯದ ಪರಾಕಾಷ್ಠೆಯಲ್ಲಿ ಅವನು ಮೃತ್ಯುವನ್ನೆದುರಿಸಲು ಸಿದ್ಧನಾದ ! ಕಣ್ಣು ಮುಚ್ಚಿ, ಹಲ್ಲು ಕಚ್ಚಿದ. ಇದ್ದಕ್ಕಿದ್ದಂತೆ ಅವನ ಮೈಯಲ್ಲೆಲ್ಲ ನೋವಿನ ಪ್ರವಾಹ ಹರಿಯಿತು. ತಡೆಯಲಾರದೆ ಕೂಗಾಡಿದ, ಕಣ್ಣೀರು ಪ್ರವಾಹ ವಾಗಿ ಹರಿಯಿತು……

*   *

ಬಹಳ Thanks ಡಾಕ್ಟರ್, ಅಂತ ಹೇಳಿ ತಾಯಿ Triple antigen ಚುಚ್ಚಿದ್ದ ಮಗೂನ ಮನೆಗೆ ಎತ್ತಿಕೊಂಡು ಹೋದಳು !

ಹೋದ ಪುಟ್ಟ, ಬಂದ ಪುಟ್ಟ

—ವಿ.ಜಿ. ಭಟ್ಟ

(ಇಂದು ಮಾನ್ಯ ಶ್ರೀ ......ಅವರು ತಮ್ಮ ವಿದೇಶ ಯಾತ್ರೆ ಮುಗಿಸಿಕೊಂಡು ತಾಯ್ನಾಡಿಗೆ ಮರಳಿ ಬಂದರು.

—ಸುದ್ದಿ)

ನೀವು ಮರೆತಿರಬಹುದು ನನಗೆ ಸಹ ನೆನಪಿಲ್ಲ
ಎಂದು ಹೊರಟರು ? ಏಕೆ ? ಪರದೇಶ ಯಾತ್ರೆ
ಹೋದವರು ಸಾಬೀತು ಮರಳಿ ಬಂದಿರುವಾಗ
ಹೋಗಿದ್ದರೆನ್ನುವುದು ಮಾತ್ರ ಖಾತ್ರಿ.

ಹೋದವರು ಸುರಳೀತ ವಾಪಸ್ಸು ಬರುವದೂ
ಸಣ್ಣ ಮಾತೇನಲ್ಲ. ಬಡ ಜನರ ಭಾಗ್ಯ.
ಹೋದ ಸುದ್ದಿಯು ನಾವು ಮರೆತಂತೆ ಅವರನೂ
ಮರೆವ ಮೊದಲೇ ಅವರು ಬಂದದ್ದು ಯೋಗ್ಯ.

ಕೈಕೊಂಡ ಯಾತ್ರೆಯಲಿ ಗೈದ ಯಜ್ಞದ ಪುಣ್ಯ
ಅವರ ಕೃತಿಯಲಿ ನಾಳೆ ಮೂಡಬಹುದು
ನಮ್ಮ ದುರ್ಭಾಗ್ಯಕ್ಕೆ ಮೂಡದಿದ್ದರೆ, ಅವರು
ಮತ್ತೊಮ್ಮೆ ಘನ ಯಾತ್ರೆ ಮಾಡಬಹುದು.

ಅವರು ಹೊರಡುವ ಮುಂಚೆ, ಮರಳಿ ತಲುಪಿದ ಬಳಿಕ
ಸತ್ಕಾರಕೂಟಗಳು ನಮ್ಮ ಹೊಣೆಯು.
ಅವರ ಕೈಯಿಂದಲೇ ವಿಧಿಲಿಖಿತ ತಿದ್ದಿಸಲು
ತೆರವಾಗಿ ಬಿದ್ದಿಹುದು ನಮ್ಮ ಹಣೆಯು.

ಗ್ರಾಜುಯೇಷನ್ ಡೇ

—ಸೂರಿ

ಮೋನಾಲಿಸಾ ಗರ್ಲ್ಸ್ ಹೈಸ್ಕೂಲಿನ ಈ ವರ್ಷದ ಗ್ರಾಜುಯೇಷನ್ ಫಂಕ್ಷನ್ ಹಿಂದೆ ಯಾವತ್ತೂ ಇಲ್ಲದಷ್ಟು ಗ್ರ್ಯಾಂಡಾಗಿ ಏರ್ಪಾಟಾಗಿತ್ತು. ಅಲ್ಲದೆ ಮತ್ತೇನು ? ಪರೀಕ್ಷೆಗೆ ಅಂತ ಕೂತಿದ್ದ ನೂರಾ ಎಂಟು ಹುಡುಗೀರಲ್ಲಿ ಎಲ್ಲರೂ ಫಸ್ಟ್ ಕ್ಲಾಸು. ಜೊತೆಗೆ ಅವರ ಪೈಕಿ ಐದು ಜನಾ one in ten.

ಸ್ಕೂಲಿನ ಅಸೆಂಬ್ಲಿ ಹಾಲಿನಲ್ಲಿ ಪಾಸಾದ ಹುಡುಗೀರು, ಅವರ ಅಪ್ಪ ಅಮ್ಮಂದಿರು, ಒಬ್ಬರನ್ನೊಬ್ಬರು ಬೆನ್ನು ತಟ್ಟುತ್ತಾ ಪೊಗದಸ್ತಾದ High Tea ನ ಕತ್ತರಿಸ್ತಾ ಇದಾರೆ. ಮತ್ತೆ ಸ್ಕೂಲಿನ ಮಿಸ್ಸುಗಳು ? ಒಬ್ಬೊಬ್ಬರೂ ಒಳ್ಳೆ Beauty Queen ಗಳು (ಯಾರೋ ಹೇಳ್ತಿದ್ದ ಹಾಗೆ ಸಿನೀಮಾ ಸ್ಟಾರುಗಳಾಗೋಕೆ ಸಾಧ್ಯ ಆಗದೆ, ಏರ್‌ಹೋಸ್ಟೆಸ್‌ಗಳಾಗೋ ಇಷ್ಟಾ ಇಲ್ಲದೋರೆಲ್ಲ ಈ ಸ್ಕೂಲಿನಲ್ಲಿ ಮಿಸ್‌ಗಳಾಗಿದ್ದಾರೆ.) ಪುನುಗಿನ ಬೆಕ್ಕುಗಳ ಥರಾ. ಬಣ್ಣದ ಚಿಟ್ಟೆಗಳ ಥರಾ ಅಲ್ಲಂದಿಲ್ಲಿಗೆ ಚಿಮ್ಮಿಕೊಂಡು. ಎದುರಿಗೆ ಬಂದೋರಿಗೆಲ್ಲ ಹಾಯ್, ಹಾಯ್ ಅಂತ ಹೇಳ್ತಾ ಓಡಾಡ್ತಾ ಇದಾರೆ. ಎಷ್ಟೋ ಜನ ಪೇರೆಂಟುಗಳು – ಸರಿಯಾಗಿ ಹೇಳಬೇಕೂ ಅಂದರೆ ಅಪ್ಪಂದಿರು – ತಟ್ಟೇಲಿರೋ ತಿಂಡಿಗಳನ್ನು ಮುಟ್ಟಿಕೂಡ ಮುಟ್ಟದೆ, ಈ ಮಿಸ್ಸುಗಳನ್ನೇ ಮಿಕ ಮಿಕ ಅಂತ ನೋಡ್ತಾ ಪಾತರ್ಲ್ ಪಶಿ ತೀರುಂ ಅಂತ ಇದ್ದು ಬಿಟ್ಟಿದ್ದಾರೆ.

ಇದಾದ ಮೇಲೆ ಸಮಾರಂಭ ಶುರು. ಪಾಸಾದ ಹುಡುಗೀರ್ಗೆಲ್ಲಾ ಅವರವರ ಕ್ಲಾಸ್ ಟೀಚರುಗಳಿಂದ ಅಭಿನಂದನೆ. ಅದಾದ ಮೇಲೆ ಸರ್ಟಿಫಿಕೇಟು, ಪ್ರೈಜುಗಳ ಹಂಚಾಟ, out-going ಹುಡುಗಿಯರ ಪೈಕಿ ಒಬ್ಬಳಿಂದ ಸ್ಕೂಲಿನ ಬಗ್ಗೆ ಪ್ರಶಂಸೆ ಭಾಷಣ, ಇತ್ಯಾದಿ, ಇತ್ಯಾದಿ.

ಸ್ಕೂಲಿನ ಮಾಮೂಲು ಪ್ರಕಾರ ಮುಂದಿನ ಕಾರ್ಯಕ್ರಮ ಅಂದರೆ ಬಂದಿರೋ ಅಪ್ಪ ಅಮ್ಮಂದಿರ ಪೈಕಿ ಒಬ್ಬರೋ ಅಥವಾ ಇಬ್ಬರಿಂದಲೋ ಒಂದು ನಾಲ್ಕು ಮಾತಾಗಬೇಕು. ಅಧ್ಯಕ್ಷತೆ ವಹಿಸಿದ್ದ ಪ್ರಿನ್ಸಿಪಾಲ್ ಹೆಲನ್ ದೇವಯ್ಯ, ಮುಂದಿನ ಸಾಲಿನಲ್ಲಿ ಕೂತಿದ್ದೋರ ಕಡೆ ಹಾಗೇಕಣ್ಣು ಹಾಯಿಸಿದರು. ಧಟ್ಟನೆ ಅವರ

ಗಮನಕ್ಕೆ ಬಂದೋರು ಅಂದರೆ, ಡೆಪ್ಯುಟಿ ಕಮೀಷನರ್ ತಾತಾಚಾರಿ ಅವರ ಹೆಂಡತಿ ರಂಗನಾಯಕಮ್ಮನವರು. ಹೌದು, ಅವರೇ ಯಾಕಾಗಬಾರದು ? ಒಳ್ಳೆ ದುಡ್ಡು ಕಾಸು, ಬಂಗಲೆ, ಕಾರು ಸಮಾಜದಲ್ಲಿ ಸ್ಟೇಟಸ್ ಎಲ್ಲಾ ಇದೆ. ಸಾಲದ್ದಕ್ಕೆ ಈ ಮೂರು ನಾಕು ವರ್ಷಗಳಿಂದ ವಿಮೆನ್ಸ್ ಲಿಬ್‌ಗಾಗಿ ಅಂತ ತಮ್ಮದೇ ಒಂದ ಅಸೋಸಿಯೇಷನ್ ಮಾಡಿಕೊಂಡು ನಾಲ್ಕಾರು ಕಡೆ ಭಾಷಣಗಳನ್ನು ಕೂಡ ಕೊಟ್ಟ ಅನುಭವ ಇದೆ.

ರಂಗನಾಯಕಮ್ಮನವರ ಭಾಷಣ ಭಾರಿ ಬಿರುಸಿನಿಂದಲೇ ಶುರು – ಮೊದಲನೆ ಬಾಲಿಗೇ ಬೌಂಡರಿ ಅನ್ನಾರಲ್ಲಾ. ಆ ಥರಾ. "ನನ್ನ ಮಗಳು ಒಳ್ಳೆ ಪರ್ಸೆಂಟ್ ತೆಗೊಂಡು ಕಾಲೇಜಿಗೆ ಪ್ರವೇಶ ಮಾಡ್ತಿದ್ದಾಳೆ ಅಂತ ನನಗ ತುಂಬಾ ಸಂತೋಷಾನೆ ಅಂದ್ರೂ, ನನಗೆ ನಾನು ಓದ್ತಾ ಇದ್ದ ಕಾಲದಲ್ಲಿ ಈ ಮೊನಾಲಿಸಾ ಸ್ಕೂಲಿನಂಥ ಜಾಗದಲ್ಲಿ ಓದೋಕ್ಕೆ ಅವಕಾಶ ಆಗಲಿಲ್ಲವಲ್ಲ ಅನ್ನೋ ವಿಷಯಾ ಕರುಳು ಹಿಂಡ್ತಾ ಇದೆ. ಆವಾಗ, ಅಂದರೆ ಸುಮಾರು ಮೂವತ್ತು ವರ್ಷದ ಹಿಂದೆ ನನಗೆ ಓದೋಕ್ಕೆ ಸಿಕ್ಕಿದ್ದು ಅಂದರೆ ಯಾವುದೋ ಹಾಳು ಕೊಂಪೇಲಿ ಗವರ್ನಮೆಂಟ್ ಸ್ಕೂಲು. ಒಂದೊಂದು ಕ್ಲಾಸಲ್ಲೂ ಅರವತ್ತೋ ಎಪ್ಪತ್ತೋ boys ಉ ಮತ್ತೆ girls. ಒಬ್ಬರ ಅಪ್ಪಾ ಅಮ್ಮಂದಿರಿಗಾದರೂ ದುಡ್ಡೇ ಕಾಸೇ ಅಥವಾ ಒಂದು ಅಂತಸ್ತೇ? ಕೇಳಬೇಡಿ. ಒಬ್ಬ ಸ್ಟೂಡೆಂಟ್ ಬೆನ್ನ ಮೇಲಾಗಲಿ ಒಂದು ಲಕ್ಷಣವಾದ ಬಟ್ಟೇನಾದ್ರೂ ಬೇಡ್ವಾ? ಉಹುಂ ಅದೂ ಇಲ್ಲ. ಇನ್ನ ಆ ಮೇಷ್ಟ್ರೋ, ಸರಿಯೋ ಸರಿ. ಒಗೀದೇ ಇರೋ ಪಂಚೆ, ತೇಪೆ ಹಾಕಿದ ಕೋಟು, ಒಂದು ಮಾರು ಹತ್ತಿರ ಬರೋ ಹೊತ್ತಿಗೆಲ್ಲಾ ಒಳ್ಳೆ ಕಿಮುಟು ನಶ್ಯದ ವಾಸನೆ. ಇಂಥಾ ಹೊಲಸು ವಾತಾವರಣ ದಲ್ಲಿ ಓದಿನ ಬಗ್ಗೆ ಉತ್ಸಾಹ ಯಾರಿಗೇ ಆದರೂ ಹೇಗ ಬರತ್ತೆ ? ಹೀಗಾಗಿ ನನಗೆ ಬಂದದ್ದು S S L C ನಲ್ಲಿ E P S – ಅಂದ್ರೆ Eligible For Public Service· ಆದ್ರೆ ನಮ್ಮ ಅಪ್ಪ ಅಮ್ಮ ಅವರ ಲೆಕ್ಕದಲ್ಲಿ ನಾನು Eligible for Parental Status. ಹಾಗಾಗಿ ನಮ್ಮನೇಲೇ ವಾರಾನ್ನ ಮಾಡ್ತಾ ಇದ್ದ ಒಬ್ಬ ಗಂಡೂ ಅನ್ನೋ ನಿಗೆ ನನ್ನ ತಗಲಿ ಹಾಕಿದರು. ನನಗೆ ಏನೇನು ಆಸೆ ಇತ್ತೋ ಅವೆಲ್ಲ ಅಲ್ಲಿಗೇ ಸತ್ತ ಹಾಗಾಯಿತು. ಈ ಮೊನಾಲಿಸಾ ಅಂಥಾ ಸ್ಕೂಲುಗಾನಾ ನನಗೆ ಸಿಕ್ಕಿದ್ದಿದ್ರೆ ಹುಂ, ಆ ಕಥೇನೆ ಬೇರೆಯಾಗ್ತಾ ಇತ್ತು. ನಾನೂ BA ನೋ MA ನೋ ಮಾಡ್ಕೊಂಡು IAS ಪಾಸುಮಾಡಿ. ಅಗೋ ಅಲ್ಲಿ ಕೂತಿದ್ಯಲ್ಲ ನನ್ನ ಗಂಡ ಅಂತ ಕರಕೊಳ್ಳೋ ಆ MCP ಅದನ್ನ ಮೀರ್ಸೋ ಥರಾ ನಾನೂ ಇರ್ತಾ ಇದ್ದೆ"

ಇದೇ ಧಾಟೀಲೇ ಇನ್ನಾ ಒಂದು ಐದು ನಿಮಿಷ ಗುಡುಗೂ ಮಿಂಚೂ, ಆಲೀಕಲ್ಲು ಮಳೇ ಅಂತ ಆದ ಮೇಲೆ ರಂಗನಾಯಕಮ್ಮ ಮೈಕ್ ಬಿಟ್ಟು ಕೆಳಗೆ ಬಂದ್ರು. ಇದ್ದ

ವರಿಗೆಲ್ಲರಿಗೂ ಒಳ್ಳೆ ಮೈಪರಚಿಕೊಳ್ಳೋ ಥರಾ ಆಯಿತು. ಅಲ್ಲಾ, ಉಪಚಾರಕ್ಕೆ ಅಂತ ಸ್ಕೂಲ್ ಬಗ್ಗೆ ಒಂದು ನಾಲ್ಕು ಒಳ್ಳೇ ಮಾತಾಡಲಿ ಅಂತ ಕರೆದ್ರೆ, ಹೀಗೇನ್ರಾ ಮಾಡೋದು ? ತಾತಾಚಾರಿ ಎಂಥಾ ಆಫೀಸರು, ಏನು ಕಥೆ ? ಇಡೀ ವಿಧಾನ ಸೌಧಾನೆ ನಡುಗಿ ಬಿರುಕು ಬಿಡುತ್ತೆ ಅವನ ಹೆಸರು ಹೇಳಿದ್ರೆ. ಅಂಥಾವನ ಮಾನಾನ ಗಾಳೀಪಾಲು ಮಾಡಿದ್ಳಲ್ಲಾ ಹೆಂಡತೀ ಅಂತ ಅನಿಸ್ಕೊಂಡೋಳು ? ನಾಳೆ ಊರಲ್ಲೆಲ್ಲ ಟಾಂ ಟಾಂ ಆಗ್ಹೋಗತ್ತೆ ತಾತಾಚಾರೀಗೆ ತುಂಬಿದ ಸಭೇಲಿ ಮಾನಾ ಹೋಯ್ತು ಅಂತ.

ಹೆಲನ್ ದೇವಯ್ಯನವರಿಗಂತೂ ಹೀಗಾಗಿ ಹೋಯ್ತಲ್ಲ ಅಂತ ನಾಚಿಕೆ, ಅದಕ್ಕೂ ಹೆಚ್ಚಾಗಿ ಭಯ ಒಟ್ಟಿಗೆ ಹತ್ತಿಕೋತು. ಒಳ್ಳೆ ಬೀದೀಲಿ ಕೂತಿದ್ದ ಮಾರೀನ ಮೈಕ್ ಮುಂದೆ ಕರೆದ ಹಾಗಾಯಿತಲ್ಲ. ಒಬ್ಬ ಹಿರೀ ಅಧಿಕಾರೀನ ಅವನ ಹೆಂಡತೀನೇ pig ಅಂತ ಕರೆದು ಮಾನ ಕಳೆದಳಲ್ಲಾ, ಅದರ ಪರಿಣಾಮ ಏನಾಗಬಹುದು ? ತಾತಾಚಾರಿಗೆ ಕೋಪ ಬಂದಿರೋದಂತೂ ಅನುಮಾನವೇ ಇಲ್ಲ. ಆದ್ರೆ ಅದನ್ನ ಹೆಂಡತಿ ಮೇಲೆ ತಿರುಗಿಸೋಕ್ಕೆ ಆಗದೇ ಅದು ತನ್ನ ಮೇಲೇನೆ ಬಂದರೆ ? ಸ್ಕೂಲ್ನ ಕಮಿಟಿಯವರಿಗೆ ಒಂದು ಮಾತು ಹೇಳಿದ್ರೆ ಸಾಕು. ನಾಳೆಯಿಂದಲೇ ಮನೆಗೆ ಕಳಿಸ್ತಾರೆ. ಈಗ ಏನಪ್ಪಾ ಮಾಡೋದು ?

ನಡಗ್ತಾ ಇರೋ ಧ್ವನೀಲಿ ನೆರೆದಿದ್ದವರನ್ನ ಕೇಳಿಕೊಂಡರು. "ಈಗ ಪೇರೆಂಟುಗಳ ಕಡೆಯಿಂದ ಇನ್ನೂ ಯಾರಾದರೂ ಬಂದು ಮಾತಾಡೋ ಹಾಗಿದ್ದರೆ ದಯವಿಟ್ಟು ಬರಬಹುದು. ಆದರೆ ಸ್ಕೂಲಿಗೆ ಸಂಬಂಧಪಟ್ಟ ಹಾಗೇ ಮಾತ್ರ ಏನಾದರೂ ಹೇಳಬೇಕು. ಅದು ಬಿಟ್ಟು ಯಾವದೇ ಬಗೆಯ controversy ನಾದರೂ ಈ forum ನಲ್ಲಿ ತರಬೇಡಿ ಅನ್ನೋದೊಂದೇ ನನ್ನ ಪ್ರಾರ್ಥನೆ"

ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಯಾರೂ ಮುಂದೆ ಬರೋ ರೀತಿ ಕಾಣಲಿಲ್ಲ. ಮೊದಲೇ Public speaking ಅಭ್ಯಾಸವಿಲ್ಲ. ಜತೆಗೆ ಹ್ಯಾಗೆ ಮಾತಾಡಿದ್ರೂ ರಂಗನಾಯಕಮ್ಮನ ಬಿರುಸಿನ ಮುಂದೆ ಅದು ಸಪ್ಪೇನೆ ಅಂತ ಅನಿಸಿ ಬಿಡುತ್ತೆ, ಅಷ್ಟೆ.

ಮೂರನೆ ಸಾಲಿನಲ್ಲಿ ಕೂತ್ಕೊಂಡು, ಹೆಂಡತೀ ಕಣ್ಣು ತಪ್ಪಿಸಿ, ಅಲ್ಲೇ ಓಡಾಡ್ತಾ ಇದ್ದ ಮಿಸ್ಸುಗಳನ್ನ ಕದ್ದು ಕದ್ದು ನೋಡ್ತಾ ಇದ್ದ ಡಾಕ್ಟರು ವೆಂಕಪ್ಪಯ್ಯನಿಗೆ ಏನು ಬಂತೋ, "I will speak, Chairperson" ಅಂದೋನೇ ಸ್ಟೇಜಿನ ಮೇಲೆ ಹಾರಿ ಬಂದ. ಗಂಟಲು ಸರಿ ಮಾಡ್ಕೊಳ್ಳೋಕೆ ಅಂತ ಒಂದು ಸಲ ಕೆಮ್ಮಿ, ತನ್ನ ಮಾತು ಶುರು ಮಾಡಿದ,

"ಈಗ ತಾನೇ ಅಂಥಾ ಸೊಗಸಾದ ಭಾಷಣಾ ಮಾಡಿದ್ರಲ್ಲ ಆ ಶ್ರೀಮತಿಯವರು, ಅವರೂ ನಾನೂ ಒಂದೇ ಹೈಸ್ಕೂಲಿನಲ್ಲಿ ಒಟ್ಟಿಗೆ ಓದಿದ್ದು ಅಂತ ನಾನು ಹೇಳಿದ್ರೆ ನಿಮಗೆಲ್ಲಾ ಆಶ್ಚರ್ಯವಾಗಬಹುದು. ಆ ಹೈಸ್ಕೂಲಿನ ಬಗ್ಗೆ ಅವರು ಹೇಳಿದ ಒಂದೊಂದು ಮಾತೂ ನಿಜ. ಆ ದರಿದ್ರ ವಾತಾವರಣಾನ. ಆ ಮೇಷ್ಟ್ರ ನಶ್ಯದ ವಾಸ್ನೇನ, ತಪ್ಪಿಸಿಕೊಳ್ಳೋಕ್ಕೆ ಇದ್ದದ್ದು ಎರಡೇ ಮಾರ್ಗ. ಒಂದು, ಶ್ರೀಮತಿಯವರು ಮಾಡಿದ ಹಾಗೆ ಓದಿನ ಮೇಲೇನೇ ಬೇಜಾರು ಬಂದು, S S L C ನಲ್ಲಿ ಫೇಲೋ. ಅಥವಾ E P S ಅಂತಲೋ ಆಗಿ ಮದುವೆ ಆಗಿ ಗಂಡನ ಮನೆ ಸೇರೋದು. ಆದರೆ ಗಂಡು ಹುಡುಗರಾದ ನಮಗೆ ಆ ಪುಣ್ಯ ಇರಲಿಲ್ಲವಲ್ಲ ! ಫೇಲೂ ಅಂತ ಆಗಿದ್ದಿದ್ದರೆ, ಅದೇ ನಶ್ಯದ ವಾಸನೆ ಮೇಷ್ಟ್ರರ ಮನೆಗೇ ಟ್ಯೂಷನ್ನಿಗೆ ಅಂತ ಕಳುಹಿಸಿ ನಾನು ಪಾಸಾಗಿ ಕಾಲೇಜು ಸೇರೋವರೆಗೂ ಬಿಡತಿರಲಿಲ್ಲ ನಮ್ಮಪ್ಪ. ಹೀಗಾಗಿ ನನಗೆ ಇದ್ದ ಒಂದೇ ಮಾರ್ಗ ಅಂದರೆ ಸರಿಯಾಗಿ ಓದಿಕೊಂಡು ಫೋರ್ತ್ ಫಾರಮ್ಮು, ಫಿಫ್ತ್ ಫಾರಮ್ಮು ಯಾವುದರಲ್ಲೂ ನಿಲ್ಲದೆ S S L C ನಲ್ಲಿ E C P S ಅಂತ ಮಾಡಕೊಂಡು ಕಾಲೇಜಿಗೆ ಹೋಗೋದು. ಹೀಗಾಗಿ ನಾನು ಎಲ್ಲ ಪರೀಕ್ಷೆಗಳಲ್ಲೂ ಫಸ್ಟ್ ಕ್ಲಾಸ್ ಅಂತ ಆಗಿ, ಕೊನೆಗೆ ಕ್ಯಾಪಿಟೇಷನ್ ಫೀ ಕೊಡದೀರಾನೆ ಮೆಡಿಕಲ್ ಕಾಲೇಜಿಗೆ ಸೇರಿ, ಇವತ್ತು ಡಾಕ್ಟರೂ ಅಂತ ಆಗಿದೇನೆ. ಅದು ಬಿಟ್ಟು ಈ ಮೊನಾಲಿಸಾ ಥರಾ ಸ್ಕೂಲಿಗಾನ ನಾನು ಸೇರಿಕೊಂಡಿದ್ದೇ ಅಂತ ಇಟ್ಕೊಳ್ಳಿ, ಆವಾಗ ನನ್ನ ಗತಿ ಏನಾಗ್ತಾ ಇತ್ತು ? ಒಂದೊಂದು ಕ್ಲಾಸಲ್ಲೂ ಕಡೇ ಪಕ್ಷ ಎರಡೆರಡು ವರ್ಷ ಕುಂಟಿಕೊಂಡು ತೈಮೂರನ ಥರಾ ಇರ್ತಾ ಇದ್ದೆ. ಹಾಗೆ ನೋಡಿದ್ರೆ ನನ್ನ ಪುಣ್ಯ, ಇಂಥಾ ಸ್ಕೂಲು ನಮ್ಮ ಕಾಲದಲ್ಲಿ ಇಲ್ದೇ ಹೋಗಿದ್ದು.

ಯಾಕೋ ಇವತ್ತು ಘಳಿಗೆ ಸರಿಯಾಗಿಲ್ಲ ಅಂತ ಅನ್ನಿಸ್ತು ಅಲ್ಲಿದ್ದೋರಿಗೆಲ್ಲ. ಆ ಹಾಳು ರಂಗನಾಯಕಮ್ಮ ನೋಡಿದ್ರೆ ಸ್ಕೂಲನ್ನ ಹೊಗಳೋ ನೆಪದಲ್ಲಿ ಗುಡಿಸ್ಹಾಕಿ ಝಾಡಿಸಿದ್ಳು. ಈಗ ನೋಡಿದ್ರೆ ಈ ವೆಂಕಪ್ಪಯ್ಯ ಸ್ಕೂಲಿಗೇ Insult ಮಾಡ್ತಾ ಇದ್ದಾನೆ. ಅಲ್ಲ, ಎಷ್ಟು ಸಂತೋಷವಾಗಿ ಇರಬೇಕಾಗಿದ್ದ ಸಂದರ್ಭ, ಯಾಕೋ ಈ ಅವಲಕ್ಷಣ ಆಯಿತಲ್ಲ, ಛೆ !

ಕೇಳ್ತಿದ್ದವರ ಮನಸ್ಸಿನಲ್ಲಿ ಏನಿದೆ ಅಂತ ವೆಂಕಪ್ಪಯ್ಯನಿಗೂ ತಿಳೀದೇ ಹೋಗಲಿಲ್ಲ. ಭಾಷಣ ಮುಂದುವರೆಸ್ತಾ ಹೇಳಿದ –

"ನನ್ನ ಮಾತನ್ನ ಯಾರೂ ದಯವಿಟ್ಟು ತಪ್ಪು ತಿಳಕೋಬಾರದು. ಆದರೆ ನಾನು ನಿಜವಾದ ಮಾತನ್ನೇ ಹೇಳ್ತಾ ಇರೋದು. ನಾನು ಒಂದು ಸಮಯ ಈ ಸ್ಕೂಲಿನಲ್ಲೇ ಕೋಎಡ್ ಆಗಿ ಸೇರಿದ್ದೆ ಅಂತ ಇಟ್ಕೊಳ್ಳಿ. ಇಂಥಾ ಒಳ್ಳೆ ಲಕ್ಷಣ

ವಾಗಿರೋ ಮಿಸ್ಸುಗಳು ನನಗೆ ಪಾಠಾ ಹೇಳೊಕ್ಕೆ ಬಂದಿದ್ರೆ, ಆವಾಗ ಏನಾಗ್ತಾ ಇತ್ತು, ಹೇಳಿ ? ಪರೀಕ್ಷೇಲಿ ಪೇಪರ್ ಕೊಟ್ರೆ, ಪಾರದ ಬದಲು ಪಾರಾ ಹೇಳಿ ದೋರು ಜ್ಞಾಪಕಕ್ಕೆ ಬಂದಿರೋರು. ಹಾಗಾಗಿ, ಎಕ್ಸಾಮಿನರು ಹೋಮರ್ ಕವಿ ವರ್ಣಿಸಿರೋ ಹೆಲನ್ ಬಗ್ಗೆ ಕೇಳಿದ್ದಿದ್ದರೆ ನಾನು ಪ್ರಿನ್ಸಿಪಾಲ್ ಹೆಲನ್ ಅವರ ಸೌಂದರ್ಯದ ಬಗ್ಗೆ essay ಬರೀತಾ ಇದ್ದೆ"

ಮಾತು ನಿಲ್ಲಿಸಿ ಒಂದು ಕ್ಷಣ ಅವನು ಹೆಲನ್ ಅವರ ಕಡೆ ನೋಡಿದ. ಒಂದು ಬಗೆ ಸಂತೋಷ. ಒಂದು ಬಗೆ ನಾಚಿಕೆಯಿಂದ ಅವರು blush ಆಗಿದ್ದರು. ಸದ್ಯ ಕೆಲವು ನಿಮಿಷಗಳ ಕೆಳಗೆ ಅವರ ಮುಖದಲ್ಲಿ ಇದ್ದ tension ಕಡಿಮೆ ಆಗಿದೆ ಅಂತಾಯಿತು. ಇನ್ನು audience, ಅವರೂ ಸ್ವಲ್ಪ ಹಾಯಾಗಿ ಉಸಿರಾಡೋಕೆ ಶುರು ಮಾಡಿದ ಹಾಗೆ ಕಾಣಿಸ್ತಾ ಇದೆ, ಪರವಾಗಿಲ್ಲ.

ಮತ್ತೆ ಮಾತು ಮುಂದುವರೆಸಿದ, driving home the advantage ಅಂತಾರಲ್ಲ ಆ ಥರಾ. "ಇನ್ನು ಸೈನ್ಸ್ ಪೇಪರಿನಲ್ಲಿ Phases of the moon ಬಗ್ಗೆ ಕೇಳಿದ್ದಿದ್ರೂ ಅಂತ ಇಟ್ಕೊಳ್ಳಿ. ಆವಾಗ ನಾನು ಏನು ಮಾಡ್ತಾ ಇದ್ದೆ ? ಅಲ್ಲಿ ನೋಡಿ, ಅಲ್ಲ ನಿಂತಿದ್ದಾರಲ್ಲ ಫಿಸಿಕ್ಸ್ ಮಿಸ್ ಚಂದ್ರಾ, ಅವರ face ಬಗ್ಗೆ ಎರಡು ಪೇಜು ಬರೆದು ಬಿಡ್ತಾ ಇದ್ದೆ, sketch ಸಮೇತ"

ಒಂದು ಥರಾ ಸಂತೋಷದಿಂದ ಆ ಫಿಸಿಕ್ಸ್ ಮಿಸ್ಸು ಒಂದು ನಿಮಿಷ ತಬ್ಬಿ ಬ್ಬಾದರೂ, audience ನಲ್ಲಿ ಇದ್ದೋರೆಲ್ಲಾ 'ಹೋ' ಅಂತ ನಕ್ಕೊಂಡು ಚಪ್ಪಾಳೆ ಹೊಡೆಯೋಕ್ಕೆ ಶುರು ಮಾಡಿದ್ರು. ಡೆಪ್ಯುಟಿ ಕಮಿಷನರ್ ತಾತಾಚಾರೀನೂ ಚಪ್ಪಾಳೆ ಹೊಡ್ಕೊಂಡು ನಗ್ತಾ ಇದ್ದದ್ದನ್ನು ನೋಡಿ ಪ್ರಿನ್ಸಿಪಾಲರಿಗೂ ಒಂದು ಥರಾ ಹಾಯಿ ಅನಿಸ್ತು. ವೆಂಕಪ್ಪಯ್ಯ ಏನೋ ಸ್ವಲ್ಪ ಗಂಭೀರ ಬಿಟ್ಟು ಒಳ್ಳೆ ಪಡ್ಡೆ ಹುಡುಗರ ಥರಾ ಮಾತಾಡ್ತಾ ಇದಾನೆ ಅಂತ ಅನಿಸಿದ್ರೂ, ಸದ್ಯ ರಂಗನಾಯಕಮ್ಮನ ಭಾಷಣ ದಿಂದ ವಾತಾವರಣದಲ್ಲಿ ಬಂದಿದ್ದ ಬಿಗಿತ ಕರಗಿತಲ್ಲ ಅಷ್ಟೇ ಸಾಕು, ಅನಿಸ್ತು.

"Oh he is s-o-o romantic!" ಈ ಮಾತನ್ನು ಗಟ್ಟಿಯಾಗಿ ಹೇಳಿದೋಳು PT ಮೇಡಂ ಕುಂಜಮ್ಮ ವರ್ಗೀಸ್.

ವೆಂಕಪ್ಪಯ್ಯ ಒಳ್ಳೆ form ನಲ್ಲಿದ್ದ. ಥಟ್ಟನೇ ಹೇಳಿದ: "No, no, I am not rheumatic. I am just hard of hearing."

ಒಂದೆರಡು ನಿಮಿಷ ಪೂರ್ತಿ ಸಭೆಯಲ್ಲಿ ಬರಿ ಚಪ್ಪಾಳೆ, ಹುಡುಗೀರ ಶಿಳ್ಳು ಇವುಗಳ ಶಬ್ದಾನೇ ತುಂಬಿ ಹೋಯಿತು.

ತಾನು ಮೈಕ್ ಮುಂದೆ ಬಂದ ಉದ್ದೇಶ ಸಾರ್ಥಕವಾಯ್ತಲ್ಲ ಅನ್ನೋ ಸಮಾಧಾನ ವೆಂಕಪ್ಪಯ್ಯನಿಗೆ ಬಂದರೂ, ಏನೋ ನೆನಪು ಬಂದ ಹಾಗೆ ಆಗಿ ತನ್ನ ಹೆಂಡತಿ ಕೂತಿದ್ದ ಕಡೆ ನೋಡ್ತಾನೆ ......

ಅನಾಹುತ ಆಗಿ ಹೋಗಿದೆ ! ಅವನ ಹೆಂಡತಿ ಗುಂಡಮ್ಮ ತಲೆ ಚಚಿಕೊಂಡು ಎಲ್ಲರಿಗೂ - ಕೇಳೋ ಥರ ಅಳ್ತಾ ಹೇಳ್ತಾ ಇದಾಳೆ—

"ಇವರಿಗೆ ವಯಸ್ಸು ಆಗಿರೋದೂ, ಎಮ್ಮೆಗೆ ವಯಸ್ಸಾಗೋದೂ ಒಂದೇನೆ. ಹುಟ್ಟುಗುಣ ಪೋಲೀತನ ಮಾತ್ರ ಹೋಗಲಿಲ್ಲ"

ಅನುಭವ

ಹಳೆಯ Mistake ಗಳಿಗೆ ಬದಲಾಗಿ ಹೊಸ Mistake ಗಳನ್ನು ಮಾಡು ವಂತೆ ಮಾಡುವ ಕಾರಣ.

ಬಜೆಟ್

ನಮ್ಮ ಸಂಶಯಗಳ ಖಚಿತವಾದ ದೃಢೀಕರಣ

ನಾಗರಿಕತೆ

ಡ್ರೈವರ್‌ಗಳಿಗಿಂತ ಹೆಚ್ಚು ಕಾರುಗಳಿರುವ ವಿಚಿತ್ರ ಸ್ಥಿತಿ.

ಬ್ರಹ್ಮಚಾರಿ

ಷರ್ಟ್‌ಗಳಿಗೆ ಗುಂಡಿಗಳಿಲ್ಲದವ; ಈತನ ಜೇಬುಗಳಿಗೆ ನಿಯಮಿತವಾಗಿ ಪ್ರತಿ ನಿತ್ಯ ಹೆಣ್ಣಿನ ಕೈ ಬೀಳುವುದಿಲ್ಲ.

ತೃಪ್ತ ಗಂಡ

ತನ್ನ ಹೆಂಡತಿಯ ಮಾತುಗಳನ್ನು ಇನ್ನೂ ಕೇಳುವ ಮನೋಭಾವವಿರುವವ.

ಬೌದ್ಧಿಕ 'ದೊಡ್ಡಸ್ತಿಕೆ ದಾಸಿ' (Intellectual snob) :

ಕೊಳ್ಳಬೇಕಾದ ಮನೆ ಸಾಮಾನುಗಳ ಯಾದಿಯನ್ನು ಇಂಗ್ಲಿಷ್‌ನಲ್ಲಿ ತಯಾರಿಸುವವಳು.

ಎಸ್. ವಿಶ್ವನಾಥ್

"ಚೋಲೆ !"

ಕಮಲಾ ರಾಮಸ್ವಾಮಿ

ಬಿರುಸಿನಿಂದ ನಡೆದಿತ್ತು ತಯಾರಿ. ಸಂಭ್ರಮ, ಸಡಗರ ತುಂಬಿ ತುರುಕಾಡು ತ್ತಿತ್ತು. ಗಂಟೆ ಮಧ್ಯಾಹ್ನ 2.30. ಇನ್ನೊಂದು ಗಂಟೆಗೆ ಶುರುವಾಗಬೇಕು ಮಹಿಳಾ ಕ್ಲಬ್ಬಿನ "ಮೀನಾ ಬಜಾರ್" "GALA EVENING"

G.M. ಹೆಂಡತಿ ಬಂದ್ರು, Badge ಹಾಕಿದ್ದ ಎಲ್ಲಾ ಸದಸ್ಯೆಯರೂ ಸೇರಿದ್ರು

"ಗೀತಾ ನೀನು ರೆಡೀನಾ ? ನಿನ್ನ Stall ಯಾವುದು ?"

"ಕೇಕ್ಸ್ ಮತ್ತು ಜ್ಯೂಸ್ ಎಲ್ಲಾ ರೆಡಿ"

"ಇಡ್ಲಿ, ದೋಸೆಗೆ ಪಂಕಜ, ಅಲಮೇಲು ಅಲ್ಲವೆ ?"

"ಹೌದು, ಮೇಡಂ. ನಾವಲ್ಲ ತಯಾರು.

"ಹಾಕಿರೋ ಹತ್ತು ಸ್ಟಾಲೂ ರೆಡಿಯಾಗಿ ಎಲ್ರೂ ಬಂದಿದ್ದಾರಲ್ವೆ ?"

"ಹೌದು, ಮೇಡಂ.

'ಸರಿ. ನನ್ನ Partner ಎಲ್ಲಿ ? ಹರ್‌ದೀಪ್ ಕೌರ್ ಬಂದಿಲ್ವೆ ?"

"ಎಲ್ಲಿ ? ಕೌರ್ ಎಲ್ಲಿ ? ಬಂದಿಲ್ವಾ......"ಎಲ್ಲರೂ ಅತ್ತ ಇತ್ತ ನೋಡಿದ್ರು.

"ಬಂದಿಲ್ಲಾಂತ ಕಾಣುತ್ತೆ. ಕಡೇ ಮಗೂಗೆ ಜ್ವರ ಅಂದಿದ್ಳು, ಯಾರೋ ಹೇಳಿದ್ರು. G.M. ಮೇಡಂಗೆ ಗಾಬರಿಯಾಯ್ತು. ಆಕೇದೇ ಪೂರಿ, ಚೋಲೆ ಸ್ಟಾಲು. ಹರಿಯಾಣದ ಶ್ರೀಮತಿ ಕೌರ್‌ಳ 'ಚೋಲೆ' ರುಚಿ ನೋಡಿದವರು ಮತ್ತೇನನ್ನೂ ತಿನ್ನಲು ಇಷ್ಟಪಡುತ್ತಿರಲಿಲ್ಲ. ಯಾವ Cooking competition ಆದ್ರೂ ಆಕೇಗೇ 1st ಪ್ರೈಜು. ಕ್ಯಾರೆಟ್ ಹಲ್ವ, ಸಮೋಸ ಇತ್ಯಾದಿಗಳಲ್ಲಿ ಎತ್ತಿದ ಕೈ. ಬಲು ರುಚಿಯಾಗಿ ಮಾಡುತ್ತಿದ್ದಳು ಹರ್‌ದೀಪ್ ಕೌರ್.

"ಸರಿ, ಸರಿ. ಬೇಗ ಯಾರನ್ನಾದ್ರೂ ಕಳಿಸಿ ಆಕೇನಾ ಕರ್ಕೊಂಡು ಬನ್ನಿ. ಆಕೆ

ಬರೋಕೆ ಆಗ್ದೆ ಇದ್ರೆ, ಚೋಲೆನಾದ್ರೂ ಕಳಿಸ್ಲಿ. ನೀನೂ, Mrs. ನಾಯರ್ ಹೋಗಿ ಬನ್ನಿ," Mrs. G.M. ರ ಆಜ್ಞೆ.

ಹತ್ತು ನಿಮಿಷವಾಯಿತು. ಶ್ರೀಮತಿ ಕೌರ್ ಬಂದರು. ಅತ್ತು, ಅತ್ತು ಕಣ್ಣು ಕೆಂಪಾಗಿತ್ತು. "ಯಾಕೆ ? ಏನಾಯ್ತು?" ಎಲ್ಲರೂ ಸುತ್ತಿಕೊಂಡ್ರು.

"ಚೋಲೆ ಇನ್ನೂ ಆಗಿಲ್ಲ ಮೇಡಂ, ಅಳುತ್ತಳುತ್ತಾ ಬಿಕ್ಕಿದಳು.

"ಎರಡು ನಿಮಿಷ ನಿಧಾನವಾದ್ರೆ ಪರವಾಗಿಲ್ಲ. ನಿಂಗೆ ಸಹಾಯಕ್ಕೆ ಯಾರಾದ್ರೂ ಬೇಕಾಗಿದ್ರೆ ಯಾವ Memberನಾದ್ರೂ ಕರೀಬೇಕಿತ್ತು."

"ಇಲ್ಲಾ ನೆನ್ನೇನೇ ಕಾಳು ನೆನೆ ಹಾಕಿದ್ದೆ. ಆದ್ರೆ... ... ಆದ್ರೆ " ಮತ್ತೆ ಬಿಕ್ಕಿದ್ಳು.

"ಅಳಬೇಡ. ಇನ್ನೂ ನಲ್ವತ್ತು ನಿಮಿಷ ಇದೆ. ನಾವ್ಯಾರಾದ್ರೂ ಸಹಾಯಕ್ಕೆ ಬರ್ತೇವೆ. ನಡಿ. ಮಾಡಿ ಮುಗಿಸೋಣ.

"ನೆನ್ನೆ ರಾತ್ರಿಯಿಂದ ಕ್ಲಬ್ಬಿನಲ್ಲಿ Bridge party ಸೇರಿದೆ. ನೀವು ಸ್ವಲ್ಪ ಹೇಳಿ ಕಳುಹಿಸಿ ಇವರನ್ನು ಮನೆಗೆ ಕಳುಹಿಸಿ. ನೆನ್ನೆಯಿಂದ ಮನೆಗೆ ಬಂದಿಲ್ಲ"

"ಶನಿವಾರ ಮಧ್ಯಾಹ್ನ ಶುರುವಾದ ಪಾರ್ಟಿ ಭಾನುವಾರ ಮಧ್ಯಾಹ್ನ ಮುಗಿಯುವುದು ಮಾಮೂಲು. ಅಲ್ಲವೆ Mrs. ಕೌರ್, ಇಸ್ಪೀಟಿಗೂ ಚೋಲೆಗೂ ಏನು ಸಂಬಂಧ ?"

"ನೋಡಿ ಮೇಡಂ, ಸತ್ಯವಾಗಿ ಹೇಳ್ತೀನಿ. ನಂಗೆ ಚೋಲೆ ಮಾಡೋಕೆ ಬರುಲ್ಲ. ನನ್ನ ಗಂಡನೇ ಮಾಡುವುದು ಯಾವಾಗ್ಲೂ. ಎಲ್ಲಾ Special ಅಡಿಗೆನೂ ಆತಂದೇ. ನನಗೆ ರೊಟ್ಟಿ, ಪಲ್ಯ ಬಿಟ್ಟರೆ ಬೇರೇನೂ ಬರದು. ನೆನ್ನೆ ಕಾಳು ನೆನೆ ಹಾಕಿರು. ಸಂಜೆ ಬಂದು ಮಾಡ್ತೀನಿ ಅಂದ್ರು,. ಇನ್ನೂ ಬಂದಿಲ್ಲ......ನೀವು ದಯ ಮಾಡಿ ಹೇಳಿ. ಬರ್ತಾರೆ !"

ಅಂತೂ ಐದು ಗಂಟೆಗೆ ಬಿಸಿ ಬಿಸಿ ಚೋಲೆ ಬಂತು,

ಮೂರು ದಶಕಗಳ ಹಿಂದೆ

(ಮಾರ್ಚಿ 1957 ರ ಕೊರವಂಜಿಯಿಂದ)

ರಥಸಪ್ತಮಿ —ಸುನಂದಮ್ಮ

(ಈ ಲೇಖನವನ್ನು ದಯವಿಟ್ಟು ಮಾರ್ಚಿ ಎಂಟರ ಬಳಿಕ ಓದುವಿರಾ ?)

ರಥಸಪ್ತಮಿ ದಿನ ಆಕೆ ಎಳ್ಳು ಬೀರಿದಳು. ಅದರಲ್ಲೇನು ಆಶ್ಚರ್ಯ ? ಸಂಕ್ರಾಂತೀಲಿ ಬೀರದವರು ರಥಸಪ್ತಮಿಲೇ ಅಲ್ವೇ ಬೀರೋದು ಅಂತೀರಾ ?.... ಹಾಗಲ್ಲ, ಆಕೆ ಹುಟ್ಟಿದ ನಲವತ್ತೈದು ವರ್ಷಕ್ಕೆ ಅವತ್ತೇ ಬೀರಿದ್ದು ! ನನಗೆ ಗೊತ್ತು, ಯಾಕೆಂದರೆ ಆಕೆ ನಮ್ಮ ಸಮಾಜದ ಹಳೇ ಸದಸ್ಯೆ. ಅಲ್ಲದೆ ನಮ್ಮ ಮಾವನವರ ಅಕ್ಕನ ಮಗಳು !

ಆಕೆ ಎಳ್ಳು ಬೀರಿದಳು. ಮನೇಲಿ ಯಾವ ಮಗುವೂ ಇಲ್ಲ, ಮೊಮ್ಮಗು ಇನ್ನೂ ಹುಟ್ಟಿಲ್ಲ, ಆದರೂ ಆಕೆಯ ಹಸಿರು ಕಾರು ಬಂದು ಬಾಗಿಲಲ್ಲಿ ನಿಂತಾಗ, ಹುಡುಗರು ಹಾರುತ್ತ ಬಂದು ಹೇಳಿದಾಗ, ನಾನೂ ಬೆಕ್ಕಸಬೆರಗಾದೆ.

ಪುಟ್ಟಾನೆಯಂತಿದ್ದ ಆಕೆ, ತಟ್ಟೆ ಹಿಡಿದು ರಥದಂತೇ ಒಳಕ್ಕೆ ಬಂದಳು. ಹಾಸಿದ ಹರಕು ಚಾಪೆಯ ಮೇಲೆ ಕೂತಳು. ಹಸಿರು ಪ್ಲಾಸ್ಟಿಕ್ ತಟ್ಟೆಯನ್ನು ನನ್ನ ಮುಂದಿಟ್ಟಳು. ಕಬ್ಬು, ಬಾಳೆ ಹಣ್ಣುಗಳೊಂದಿಗೆ ಹಸಿರು ಕಾಗದದ ರಥವನ್ನು ಕತ್ತರಿಸಿ ಅದರೊಳಗೆ ಎಳ್ಳು ತುಂಬಿದ್ದರು. ಸಕ್ಕರೆಯ ರಥಕ್ಕೆ ಹಸಿರು ಬಣ್ಣ ಹಾಕಿತ್ತು. ಕೊಬ್ಬರಿಯನ್ನು ಗುಂಡಗೆ ಕೊರೆದು ರಥದ ಗಾಲಿಯಂತೆ ಸುನೇರಿಯಿಂದ ಸಿಂಗರಿಸಿದ್ದರು !

"ಅಪರೂಪ ಮಿಾನಮ್ಮನೋರೇ ! ನಾನು ಸಂಚಾರ ಹೂಡಿದ ಇಷ್ಟು ದಿನಕ್ಕೆ ಇವತ್ತೇ ನೀವು ಬಂದಿರೋದು !"

"ಹೌದು ನರಸೂ, ಎಲ್ಲೋ ಬರೋಕ್ಕೇ ಆಗಲಿಲ್ಲ. ಏನೋ ಈ ಸಾರಿ ನನಗೆ

ಗ್ರಹಗಳು ಕ್ರೂರವಾಗಿವೆಯಂತೆ ! ಸೂರ್ಯ ನಮಸ್ಕಾರ ಮಾಡ್ಸಿ, ಸೂರ್ಯ ರಥ ಏರೋ ದಿನ ರಥಸಪ್ತಮಿ ಇವತ್ತು ಅಂತ ಹತ್ತು ಜನ ಮುತ್ತೈದೇರಿಗೆ ಎಳ್ಳು ದಾನ ಮಾಡೋಣ ಅಂತ ಹೊರಟೆ !"

"ಒಳ್ಳೇ ಕೆಲ್ಸ ಮಾಡಿದಿರಿ. ನಿಮಗೇನು ದೇವರು ಕಡಿಮೆ ಮಾಡಿದಾನೆ ಹೇಳಿ! ಹತ್ತು ಜನಕ್ಕಲ್ಲದಿದ್ರೆ ನೂರು ಜನಕ್ಕೆ ನೀಡಬಲ್ರಿ!... ಪಾಪ, ಹಾಗಾದ್ರೆ, ಗ್ರಹಚಾರ ಚೆನ್ನಾಗಲ್ಲವೇ ನಿಮಗೆ ?"

"ಇಲ್ಲಮ್ಮ, ಇಷ್ಟಕ್ಕೂ ಯಾವಾಗ ತಾನೇ ನನ್ನ ಗ್ರಹಚಾರ ಚೆನ್ನಾಗಿತ್ತು ಹೇಳು !"

"ಹಾಗಂದ್ರೇನು ಮಿನಮ್ಮನೋರೇ ! ಗೌರಮ್ನ ಹಾಗೆ ಘನವಾದ ಸಂಸಾರ ಆಳ್ತಿದೀರಿ!"

"ಉಂ! ಆಳ್ತಿದೀನಿ!....ನಿನ್ನ ಕೈಲಿ ಹೇಳ್ಕೋತೀನಿ ನರಸೂ....ಯಾಕೋ ಎಲ್ಲ ನಿನ್ಹತ್ರ ಹೇಳಬೇಕು ಅನ್ನಿಸುತ್ತೆ!....ನೋಡು ನರಸೂ, ನಂಬ್ತೀಯೋ ಬಿಡ್ತೀಯೋ, ನಾನಾಗೋ ಹೊತ್ತಿಗೆ ಇಂಥಾ ಗಂಡನ್ನ ಕಟ್ಕೊಂಡು, ಸಂಸಾರ ರಥಾನ ಎಳೀತಾ ಇದೀನಿ!....ಇನ್ಯಾರಾದ್ರೂ ಆಗಿದ್ರೆ...!

"ಅಂದ್ರೆ ! ನಿಮ್ಮೆಜಮಾನ್ರು !...?"

"ಸ್ವಲ್ಪವೂ ಒಳ್ಳೇರಲ್ಲ ನರಸೂ. 'ಎತ್ತು ಏರಿಗೆ, ಎಮ್ಮೆ ನೀರಿಗೆ' ನಮ್ಮ ಬಾಳು! ಎಲ್ಲಾತಕ್ಕೂ ನಾನೂ ಏತಿ ಅಂದ್ರೆ ಅವರು ಪ್ರೇತಿ !"

"ಹಾ ! !"

"....ಮಾತಿಗೆ ಹೇಳ್ತೀನಿ ನೋಡು ನಿನಗೆ ಗೊತ್ತಿದ್ಯಲ್ಲ. ನಾನು ಈ ಸಮಾಜ, ಸಮ್ಮೇಳನ, ಅದು ಇದು ಕಟ್ಕೊಂಡು ವದ್ದಾಡೋದು ಹೊತ್ತು ಕಳಿಯುಕ್ಕೆ —ಅವರೆಲ್ಲ ಬಲವಂತಮಾಡಿ ನನ್ನ ಈ ಹಸುವಿನ್ಗುಡೀಗೆ ಪ್ರತಿನಿಧಿಯಾಗಿ ನಿಲ್ಸಿದ್ರು. ಹೋಗಲಿ, ಅವರ ಮಾತ್ಯಾಕೆ ತೆಗೀಬೇಕು, ಅವರ ವಿಶ್ವಾಸ ಅಂತ ನಾನೂ ಒಪ್ಕೊಂಡೆ. ಹಣ ಕಟ್ಟಿ ಹಿಂದಕ್ಕೆ ಬಂದ ಕೂಡ್ಲೆ ಇವರು ಹೋಗಿ ತಮ್ಹೆಸರು

ಕೊಟ್ಟು ಬರೋದೇ—ನನಗೆ ಎದುರಾಳಿಯಾಗಿ !"

"ಛೇ! ಏನನ್ಯಾಯ ಮಿಾನಮ್ಮನೋರೆ ! ಹೀಗೂ ಉಂಟೇ!"

"ಉಂಟಮ್ಮ ಉಂಟು!...ಏನ್ಮಾಡೋದು, ನಾನು ಕೇಳಿಕೊಂಡು ಬಂದದ್ದು! ...ಇನ್ನು ಬರಲೇ ನಾನು ! ಮಾತಾಡ್ತಾ ಕೂತುಬಿಟ್ಟೆ...ಹೊತ್ತಾಗಿಹೋಯ್ತು !"

"ಬಂದೆ...ಕಮ್ಲೂ ... ಕುಂಕುಮ ಎಲೆಡಿಕೆ ತಂದ್ಕೊಡಮ್ಮಾ ... ಹೊರಟೇ ಬಿಟ್ರಾ ?"

"ಹೂಮ್ಮ.......ಅಂದ್ಹಾಗೆ... ನರಸೂ ! ನೀವಾದ್ರೂ ನಾಲಕ್ಕು ಜನ ನನಗೆ ಬೇಕಾದೋರು ಬೆಂಬಲ ನೀಡ್ತೀರಿ ಅಂತ ನಂಬಿದೀನಿ !...ನನ್ನ ಗುರುತು...ಹಸಿರು ರಥ! ಮರೀಬೇಡ...ಬರ್ತೀನಿ !....

ಪಾಪ, ಮಿಾನಮ್ಮನೋರು ಹೀಗೆ ಕುಂಬಳೂರಿನಲ್ಲಿ ತಮಗೆ ಪರಿಚಯವಿದ್ದ ಮನೆಗಳಿಗೆಲ್ಲಾ ಹೋಗಿ, ಮನಬಿಚ್ಚಿ ಮಾತಾಡಿ ಕಣ್ಣೀರಿಟ್ಟರಂತೆ ! ಮಹಿಳೆಯರೆಲ್ಲ, ಮಿಾನಮ್ಮನ ಯಜಮಾನರ ಮೇಲೆ ಹಲ್ಲು ಮಸೆದು, ಗಂಡು ಜಾತಿಯ ಸ್ವಾರ್ಥತೆಗೆ ಮರುಗಿ, ಒಗ್ಗಟ್ಟಿನಿಂದ ಹಸಿರು ರಥಕ್ಕೇ ಓಟು ಕೊಟ್ಟರಂತೆ !

ನಂತರ ವಿಚಾರಿಸಿದಾಗ ತಿಳಿಯಿತು—ಮಿಾನಮ್ಮನ ಮನೆಯಾತ ಚುನಾವಣೆಗೆ ನಿಂತೇ ಇರಲಿಲ್ಲವಂತೆ. ಕೂತೇ ಇದ್ದನಂತೆ ಕಾರು ಸೀಟಿನ ಬುಡದಲ್ಲಿ—ರಥಸಪ್ತಮಿ ಎಳ್ಳು ಬಾಗಿನದ ತಟ್ಟೆ ಜೋಡಿಸಿಕೊಡುತ್ತ !

ಪಾರ್ಕಲಾಂ !

—ಎಲಿಬೇತೂರು ಹಾಲೇಶಿ

'ಪಾರ್ಕಲಾಂ!' ಅಂದ್ರೆ ತೆರಿಯಾದ ? ತಮಿಳಿನ ಈ ಪದಕ್ಕೆ "ನೋ-ಡೋ-ಣ" ಅಂತ ಅರ್ಥ ಸ್ವಾಮಿ ! ಯಾವುದೇ ಆಫೀಸ್‌ನಲ್ಲಾಗಲೀ ಅರ್ಜಿಯ ಮೇಲೆ ಅವರ 'ಮರ್ಜಿ'ಗೆ ತಕ್ಕಂತೆ 'ಭಾರ' ಇಟ್ಟರೂ ಸಿಗುವ ಉತ್ತರ ಅದೇ "ನೋ-ಡೋ-ಣ" ಅಂತ. ಗೃಹ ಕಲಹದಿಂದಾಗಿ ಸಾಹೇಬರಿಗೆ ಮೂಡಿಲ್ಲದಿದ್ದರೆ ಆ ಪದದ ಮೊದಲಕ್ಷರವನ್ನೇ ನಮಗೆ ವಾಚಿಸಬಹುದು !

'ಮತ' ಕೇಳಲು ಬಂದ ರಾಜಕಾರಣಿ ನಮ್ಮ ಬೇಡಿಕೆಗಳಿಗೆಲ್ಲಾ 'ಮಾಡೋಣ' ಎಂದೇ ಸಮ್ಮತಿಸಿಯಾನು ! ಐದು ಪೈಸೆಯ ಐಸ್‌ನಂತೆ ನಾವು ಕರಗಿ 'ಮತ' ನೀಡಿ 'ಸಮ್ಮತಿ' ಸೂಚಿಸಿದೆವ್ರ–ಎನ್ನೋಣ. ಆತ ಆಯ್ಕೆಯಾದೊಡನೆ ಸಿಗುವ ಉತ್ತರ– "ನೋಡೋಣ"

ನೀರುಳ್ಳಿ ಬೆಳೆದು ಲಾಭ ಮಾಡಿಕೊಂಡಿದ್ದ ನಮ್ಮೂರ ಕೆಂಚ. ನಂತರ ಬೆಳ್ಳುಳ್ಳಿ ಬೆಳೆದ. "ಬೆಳ್ಳುಳ್ಳಿಗೆ ಈ ಪಾಟಿ ರೇಟೈತೆ ! ಇನ್ನೂ ಏರ್ತೈದು. ನೋಡೋಣ." ಅಂತ ಬೆಳದ ಬೆಳ್ಳುಳ್ಳಿಯನ್ನೆಲ್ಲಾ ಸ್ಟಾಕ್ ಮಾಡಿಟ್ಟ. ಗಾಳಿ ಬಂದಾಗ ತೂರಿಕೊಳ್ಳುವಂತೆ–ರೇಟು ಬಂದಾಗ ಮಾರಿಕೊಳ್ಳಲಿಲ್ಲ. ಬೆಳ್ಳುಳ್ಳಿ ಕೊಳೆತು ಕರಕಾಗಿ ಬಿಟ್ಟಿದ್ದವು. ನೀರುಳ್ಳಿ ಲಾಭ ಬೆಳ್ಳುಳ್ಳಿಯಲ್ಲಿ ಹೋಗಿತ್ತು !

"ಪರೀಕ್ಷೆ ಹತ್ತಿರ ಬರುತ್ತಿದೆ. ಓದು ಮಗ" ಎಂದು ಹೆಬ್ಬೆಟ್ಟೊತ್ತುವ ತಂದೆ ಹೇಳಿದರೂ–"ಇನ್ನೂ ಟೈಮಿದೆ. ನೋಡೋಣ" ಎಂತಲೇ ಕಲಿಯುತ್ತಿರುವ ಆ ಮಗ ಹೇಳೋದು. ಫಲಿತಾಂಶ ಕೇಳುವುದೇನಿದೆ ? ದಢಮ್ಮ ದುಡಕಿ ! ಮುಂದೆ ಇದ್ದೇ ಇದೆಯಲ್ಲಾ—ಪ್ರಖ್ಯಾತ ಇಂಗ್ಲೀಷ್ ಹಾಡು— "ಕಮ್ ಸೆಪ್ಟೆಂಬರ್" ಅಂತ.

ಅಂದು ಭಾನುವಾರ. ಸಂಡೇ ಸ್ಪೆಷಲ್ ಏನುಂಟು ರಾಯ್ರೇ. ಕೊಡಿ" ಅಂದೆ ಪರಿಮಳ ಹೋಟಲಿನ ಭಟ್ಟರಿಗೆ. "ಇರಿ ! ನೋಡೋಣ" ಎಂದು ಮಾಯವಾದ

ಭಟ್ಟರು ಬರುವಾಗ ಕೈಯಲ್ಲಿ (ವಿ)ಚಿತ್ರಾನ್ನದ ಪ್ಲೇಟನ್ನು ತಂದಿದ್ದರು. ಶನಿವಾರದ 'ಶೇಷ' ಭಾನುವಾರದ 'ವಿಶೇಷ'ವಾಗಿತ್ತು !

ಮರುದಿನ ಸೋಮವಾರ. "ರೀ ! ಈದಿನ ಸೋಮವಾರ. ಆಫೀಸಿಗೆ ಹೊರಡಬೇಕು. ಬೇಗನೇ ಸ್ನಾನ ಮುಗಿಸಿ ಬನ್ನಿ. ಬಾಥ್ ರೂಮ್ ಥಿಂಕರ್ ಆಗ್ಬೇಡಿ" ಎಂದು ಎಚ್ಚರಿಸಿದಳು ನನ್ನ ಹೋಮ್ ಮಿನಿಸ್ಟರಿಣಿ. ನಾನು ನನ್ನ ಮಾಮೂಲಿ ಮೂಡ್‌ನಲ್ಲೇ ಸ್ನಾನಕ್ಕೆ ಇಳಿದೆ.

"ಲಾಟರಿ ಟಿಕೆಟ್ ಕೊಂಡು ಲಕ್ಕಿಲ್ಲದೆ ಅವಲಕ್ಕಿಯಾದರೂ 'ನೋಡೋಣ' ಎಂದು ಮತ್ತೆ ಲಾಟರಿ ಟಿಕೆಟ್ ಕೊಂಡೇಕೊಳ್ಳುತ್ತಾರಲ್ಲ ? ಕೈ ತೋರಿಸಿ ಅವಲಕ್ಷಣ ಎನಿಸಿಕೊಂಡರೂ ಮತ್ತೆ ಭವಿಷ್ಯ ಕೇಳುವುದನ್ನು ಬಿಡುತ್ತಾರೆಯೆ ? ತನಗೇ ಭವಿಷ್ಯ ವಿಲ್ಲದೆ ಸಂತೇ ಬೀದಿಯ ಪಕ್ಕದಲ್ಲಿ ಬಂದು ಕುಳಿತವನ ಬಳಿ ಭವಿಷ್ಯ ಕೇಳುವುದೆಂದರೆ ಹೇಗೆ ? ಮುಂದುವರಿಯಬೇಕಾದವರು–ಹಿಂದುಳಿಯುವುದರಲ್ಲೇ–ಮುಂದಾದರೆ ಹಿಂದೂದೇಶದ ಭವಿಷ್ಯವೇನು ? 21ನೇ ಶತಮಾನಕ್ಕೆ ಹೋಗುವುದು ಹೇಗೆ ? ಇನ್ನೂ 13 ವರ್ಷಗಳು ಬದುಕಿದ್ದರೆ ತಾನೆ ? ನೋಡೋಣ"–ಎಂದುಕೊಳ್ಳುತ್ತಾ ತಲೆಗೆ ಬಿಸಿ ನೀರನ್ನು ಸುರಿದುಕೊಂಡೆ. ಬಿಸಿ ನೀರು ಬಿದ್ದೊಡನೇ "ಯುರೇಕಾ" ಎಂದು ನನಗೆ ನಾನೇ ಮಣಮಣಿಸಿದೆ. "ಭವಿಷ್ಯವನ್ನು ನೋಡಬಾರದು.–ನಿರ್ಮಿಸ ಬೇಕು. ಪಾರ್ಕಲಾಂ !–ಅರ್ಥಾತ್ "ನೋಡೋಣ" ಎಂಬ ಪದದ ಸಮಾನ ಅರ್ಥ "ಇಲ್ಲ" ಅಂತ. ಯಯವುದಕ್ಕೂ ಪಾರ್ಕಲಾಂ !"

ನನ್ನ ಜೀವನ ದರ್ಶನ

—ಗುಂಡೂರಾವ್

ಯಾಕೋ ಈಚೆಗೆ ಜನ ನನ್ನ ನೋಡೋ ರೀತೀನೇ ವ್ಯತ್ಯಾಸ ಆಗ್ತಾ ಇದೆ ಅನ್ನಿಸ್ತಾ ಇದೆ ನನಗೆ.

ಮೊನ್ನೆ ನಮ್ ಪಕ್ಕದ ಮನೆ ಮಗು, ಐದು ವರಷದ್ದು, ನನ್ನ 'ತಾತ' ಅಂತ ಕರ್‍ದ್ಯೋದೆ ? ನಾನು 'ಅಲ್ಲಮ್ಮ, ನನ್ನ ಅಂಕಲ್ ಅಂತ ಕರಿ' ಅಂತ ಇನ್ನಿಲ್ಲದ ಹಾಗೆ ಹೇಳಿದರೂ ಆ ಮಗು ನನ್ನ 'ತಾತ, ತಾತ' ಅಂತನೇ ಕರಿಯುತ್ತೆ.

ಅದು ಹಾಗಿರಲಿ, ಈಗೀಗ ನನ್ಮಕ್ಳು, ಎಲ್ಲರೂ ಊಟಕ್ಕೆ ಕೂತಾಗ ನಾನು ಸೀರಿಯಸ್ಸಾಗಿ ಜೀವನ, ಇರಬೇಕಾದ ರೀತಿ, ಸಾಧಿಸಬೇಕಾದ ಗುರಿ ಅಂತ ಏನೇನೋ ಗಹನವಾದ ವಿಷಯಗಳ ಬಗ್ಗೆ ಮಾತಾಡ್ತಾ ಇದ್ದರೆ 'ಅಣ್ಣ, ಕೊಂಚ ಕಾಲೇಜಿನಲ್ಲಿ ಕೆಲ್ಸ ಇದೆ, ನಾನು ಆಮೇಲೆ ಬರ್‍ತೀನಿ' ಅಂತ ಮೆಲ್ಲಗೆ ಜಾರಿಕೊಳ್ಳೊಕ್ಕೆ ಶುರು ಮಾಡಿದ್ದಾರೆ.

ಅಷ್ಟೆಲ್ಲಾ ಯಾಕಪ್ಪಾ, ನನ್ನ ಸ್ವಂತ ಹೆಂಡ್ತಿ, ಮಾತಾಡೋ ರೀತಿ, ಗತ್ತು ಸಹ ಕೊಂಚ ಮಾರ್ಪಾಟಾಗಿದೆ. ಮುಂಚೆ ನಾನೇನಾದರೂ ರೇಗೋ ಹಾಗೆ ಕಂಡರೆ ಸುಮ್ಮನಾಗುತ್ತಿದ್ದ ಹೆಂಗ್ಸು, ಈಗೀಗ ನೇರಿಗೆ ಸವಾಸೇರು ಅನ್ನಕ್ಕೆ ಹೇಸೋಲ್ಲ ! ನಂಗಂತೂ ಇದ್ಯಾಕೆ ಹೀಗೆ ಆನ್ನೋದೆ ಅರ್ಥ ಆಗ್ತನೇ ಇಲ್ಲ.

ಮೊನ್ನೆ ನಮ್ಮ Doctor ಹತ್ರ ಏನೋ ಕೊಂಚ 'ಇರ್ಸು–ಮುರ್ಸು' ಅಂತ ಹೋಗಿದ್ದೆ. ಇಲ್ಲಿ ತನಕ ಯಾವಾಗ್ಲೂ 'ಏನಿಲ್ಲರೀ, ಎಲ್ಲ ಸರಿ ಹೋಗುತ್ತೆ' ಅಂತ ಇದ್ದೋರು, ಈಗ 'ಭಾರ ಎತ್ಬೇಡಿ, ತುಂಬ ತಿನ್ನ ಬೇಡಿ, ಜಾಸ್ತಿ ಕುಡಿ ಬೇಡಿ, ಅದು ಮಾಡ್ಬೇಡಿ–ಇದು ಮಾಡ್ಬೇಡಿ' ಅಂತ ಒಂದು ದೊಡ್ಡ, ಉದ್ದದ 'ಮಾಡು–ಬೇಡ'ದ list ಕೊಡೋದೆ ? ಅಷ್ಟೇ ಸಾಲದು ಅಂತ ಕೊಂಚ Blood test ಮಾಡಿಸಿ, ಹಾಗೆ urine ಸಹ Test ಮಾಡ್ಸಿಬಿಡಿ. ಆಮೇಲೆ ಏನ್ಮಾಡಬೇಕು ಅಂತ

ಪೇಳ್ತೀನಿ ಅಂತ ಹೇಳಿ ತಂದ್ರು ಒಂದು ನಾನ್ನೂರು-ಐನೂರಕ್ಕೆ.

ನಂಗ್ಯಾಕೋ ತಡೀಲಿಲ್ಲ, 'ಅಲ್ಲಾ ಡಾಕ್ಟ್ರೆ ಇದೇನು, ಇಷ್ಟು ದಿನ ಇಲ್ಲದ್ದು, ಈಗ ಅದು ಚೆಕ್ ಮಾಡ್ಸಿ, ಇದು Test ಮಾಡ್ಸಿ, ಅಂತ ಹೇಳ್ತಾ ಇದ್ದೀರಲ್ಲಾ ಅಂತನ್ನೋ ಮಾತ್ನ ಅಂದೆ. ಅದಕ್ಕವರಂದ್ರು, 'ಇಲ್ಲಪ್ಪ, ಈ ವಯಸ್ಸಿನಲ್ಲಿ ಕೊಂಚ ಹುಶಾರಾಗಿರೋದು, ಒಳ್ಳೇದು' ಅಂತ.

ಆಗ ಗೊತ್ತಾಯಿತು ನೋಡಿ, ಆಗಿರೊ ವ್ಯತ್ಯಾಸಕ್ಕೆ ಕಾರಣ. ಎಲ್ಲಾ ನನ್ನ ವಯಸ್ಸಿನ ಮಹಾತ್ಮ ಅಂತ.

ಎರಡು ತಿಂಗಳ ಹಿಂದೆ ಅಯ್ತು ನೋಡೀಪ್ಪ ನನ್ನ Half century, ಐವತ್ತರ ಹಬ್ಬ. ಅದು ಆದದ್ದೇ ತಡ ನಾನು ಇದ್ದಕ್ಕಿ ಇದ್ದ ಹಾಗೆ ದೊಡ್ಡೋನಾದೆ !

'ಹಾಯ್' ಅಂತ ಕರೀತಿದ್ದ ಹೆಂಗಳೆಯರೆಲ್ಲಾ ನನ್ನ ಯದ್ವಾ-ತದ್ವಾ 'uncle' ಅಂತ ಕರಿಯೋಕ್ಕೆ ಶುರು ಮಾಡಿದ್ರು.

ಮನೆಯಾಕೆಯ ಕೈ-ಬಾಯ್ ಜಾಸ್ತಿಯಾಯಿತು. 'ಇದೇನು ಎಳೇ ಹುಡುಗರ ಹಾಗೆ ಆಡ್ತೀರ' ಅಂತ ಮಾತು ಮಾತಿಗೂ ಸೇರಿಸಕ್ಕೆ ಶುರು ಮಾಡಿದಳು.

ಸುಮ್ನಿರ್ಲಾರ್ದೆ ನಾನು, ಕನ್ನಡಿ ಮುಂದೆ ನಿಂತು, ಒಂದ್ಸಲ 'Self assessment' ಮಾಡ್ಕೊಳ್ಳೊಕೆ ತೀರ್ಮಾನಿಸಿ, ಹಾಗೆ ಮಾಡೂಬಿಟ್ಟೆ ನೋಡಿ......ಹೌದು side locks ಎಲ್ಲಾ ಬೆಳ್ಳಾಗಿದೆ, ಮೀಸೇಲಿ ಬಿಳೀ ಚುಕ್ಕೆಗಳೇ ಜಾಸ್ತಿ, ತಲೇ ಮೇಲಿನ ನನ್ನ ಶಿಖೆ ಆಗಿದೆ, receding hairline ಉ, ಅಲ್ಲಲ್ಲಿ ಹಣೇ ಮೇಲೆ ಗೆರೆಗಳು, ಕೊಂಚ Double chinnu.

ಹಾಗೇ ಕೆಳಗೆ ಬಂದರೆ ಮೆಲ್ಕೈ ಲಕ್ಷಣ ಇನ್ನೂ ಅಧ್ವಾನ. ಪೀಪಾಯಿಗೆ ಸಫಾರಿ ಹಾಕಿದ ಹಾಗೆ !

ಈಗ ಗೊತ್ತಾಯಿಂತು ಬಿಡಿ, ಯಾಕೆ ನನ್ನ ಜನ 'ಒಂದ್ ಥರಾ' ನೋಡ್ತಾರೆ ಅಂತ.

ನಮ್ಮ ಆಫೀಸ್‌ನಲ್ಲಿ 'ನೋಡಿ ಮಿಸ್ಟರ್............ರಾಯರೆ, ನೀವು ನಮ ಸಂಸ್ಥೆಗೆ ಬೇಕಾದಷ್ಟು ಸೇವೆ ಸಲ್ಲಿಸಿದ್ದೀರಿ, ಅದಕ್ಕಾಗಿ ಸಂಸ್ಥೆ ಆಭಾರಿ' ಅಂತ ಪೀಠಿಕೆ. ನಂಗೆ ಮನಸ್ಸು ಕಸಿ-ವಿಸಿ ಆಯಿತು. ಸುಮ್ಮನಿದ್ದೆ. ಅವರು ಮುಂದುವರಿಸಿ' ತಮ್ಮಂತಹವರನ್ನು ಗಮನದಲ್ಲಿಟ್ಟುಕೊಂಡು, 'ತಮ್ಮಂತಹವರಿಗೆ (ಸಂಸ್ಥೆಗೆ ಅಲ್ಲಾ) ಸಹಾಯಾ ಆಗ್ಲಿ ಅಂತ ಒಂದು Scheme ಇದೆ' ಅಂತ ಸವಿವರವಾಗಿ, ರಸವತ್ತಾಗಿ Voluntary retirement scheme ನ explain ಮಾಡಿದರು. ಅಂದದ್ದೆಲ್ಲಾ ಅಂದು, ಹೇಳಿದ್ದೆಲ್ಲಾ ಹೇಳಿದ ಮೇಲೆ 'ನಾನು ಇದನ್ನ ನಿಮ್ಮ ಗಮನಕ್ಕೆ ತಂದೆ ಅಂತ ಏನೂ ತಿಳಿದ್ಕೊ ಬೇಡಿ' ಅಂತ ವಗ್ಗರಣೆ ಹಾಕಿದರು.

ನಂಗೆ ಮನವರಿಕೆ ಆಗ್ತಾ ಇದೆ. ನನ್ನ ವಯಸ್ಸು ಮುದಿ ಎತ್ತಿನ ವಯಸ್ಸು, ಯಾರಿಗೂ ಬೇಡವಾದ ವಯಸ್ಸು ಅಂತ. ಈ ವಯಸ್ಸಿನವರು ಲೆಕ್ಕಕ್ಕೆ ಉಂಟು ಆಟಕ್ಕಿಲ್ಲ. ಎಳೆಯರು ನವಿರಾಗಿ 'Avoid' ಮಾಡೋವಯಸ್ಸು. Doctor ನಮ್ಮ ಆರೋಗ್ಯದ ಬಗ್ಗೆ ತುಂಬ Doubt ಪಡೋ ವಯಸ್ಸು. ಸಾಲ ಸಿಕ್ಕದಿರೋ ವಯಸ್ಸು. ಒಳ್ಳೇ 'Middle class' ವಯಸ್ಸು ನೋಡಿ ಇದು, ಚಿಕ್ಕೋರು ಜೊತೆ ಸೇರಿಸ್ಕೊಳ್ಳೊದಿಲ್ಲ. ಮುದುಕರ ಜೊತೆ ಸೇರೋಕೆ ನಮ್ಗೇ ಇಷ್ಟಲ್ಲ. ಎಲ್ಲಾ ವಿಷಯಗಳು ತಿಳಿದಿದೆ ಅಂತ ಸುಳ್ಳು ನಂಬಿಕೆ ಹುಟ್ಸೊ ವಯಸ್ಸಿದು. ಕೇಳೋದಿದ್ದರೆ ಮಾತಾಡ್ತಾನೆ ಇರ್ಬೇಕು ಅನ್ಸೊ ಅಂತ ವಯಸ್ಸು. 'ಗಂಡಂಗೊಂದು ಕಾಲ–ಹೆಂಡತಿಗೊಂದು ಕಾಲ'ದಲ್ಲಿ ಹೆಂಡ್ತಿ ಕಾಲ ಇದು.

ಇದೆಲ್ಲಾ ಯಾಕ್ರಿ, ನಮ್ಗೇ ಬೇಡವಾದ ವಯಸ್ಸುರಿ ಇದು. ಯಾಕೆ ಅಂತೀರ? ಈ ವಯಸ್ಸಿನ ತನಕ ದುಡಿದು ಸಂಪಾದಿಸಿದ್ದನ್ನ enjoy ಮಾಡಕ್ಕಾಗದ ವಯಸ್ಸು.

ಚೆನ್ನಾಗಿ ಕುಡಿದು–ತಿಂದು–ತಿರುಗಿ ಮಜಾ ಮಾಡೋ ವಯಸ್ಸಿನಲ್ಲಿ, ದುಡಿದು ಹಣ, ಯಶಸ್ಸು ಗಳಿಸೋ ಹುಮ್ಮಸ್ಸು, ಆತುರ. ಅದೆಲ್ಲಾ ಒಂದು stage ಬಂದ್ಮೇಲೆ, ನಮಗೇ stage ಮೇಲೆ ಜಾಗ ಇಲ್ದೆ, side wings ಗೆ ಹೋಗಬೇಕಾ ಗೋ ವಯಸ್ಸು.

ಅಂತೂ, Half century ಹೊಡದ ಮೇಲೆ, ಒಂದು ನಿಮಿಷ ನಿಂತು, ಹೊಡೆದ ರೀತಿನ, ನೀತಿನ, ನಡೆದು ಬಂದ ದಾರಿನ ಜ್ಞಾಪಿಸಿಕೊಂಡು, ಮೆಲು

ಹಾಕೋದೆ ಚೆಂದ. ಈ half century ಹೊಡೆಯೋ ಹೊತ್ತಿಗೆ, ಎಷ್ಟೋ ಸಲ catch ಕೊಟ್ಟಿರ್ತೀವಿ. ಬಿಟ್ಟಿರ್ತಾರೆ, ಕೆಲವು ಸಲ ಬೋಲ್ಡೂ ಆಗಿರ್ತೀವಿ, ಆದ್ರೆ out ಆಗಿರಲ್ಲ.

ನನ್ನ ಅನಿಸಿಕೆ, ಐವತ್ತಾಗಿದ್ರೆ ನಿಮ್ಗೂ ಅನ್ನಿಸ್ತಿರುತ್ತೆ–ಐವತ್ತಾಗಿಲ್ಲದಿದ್ದರೆ ಆಗುತ್ತೆ ಬಿಡಿ, ಎಲ್ಲೋಗುತ್ತೆ.



“ಅತ್ತೆ ಸೊಸೆ ಜಿಲ್ಲಾ ಪರಿಷತ್ ಚುನಾವಣೇಲಿ ಬೇರೆ ಬೇರೆ ಪಾರ್ಟಿಯಿಂದ ಗೆದ್ದಿದಾರೆ. ಅದಕ್ಕೆ ಶುರು ಆಗಿದೆ.”

ಪುಸ್ತಕದ ಹುಳುಗಳಿಗಾಗಿ

—ಬಾಲು

ಈ ಕೆಳಗಿನ ವಾಕ್ಯಗಳನ್ನು ಪ್ರಸಿದ್ಧ ಕನ್ನಡ ಕೃತಿಗಳಿಂದ ಆಯ್ದು ಕೊಡಲಾಗಿದೆ. ಕೃತಿಯನ್ನು ಸರಿಯಾಗಿ ಗುರುತಿಸಿ ಹೆಸರಿಸಿದರೆ, ಒಂದು ವರುಷದ ಚಂದಾ ಬಹುಮಾನ. ಸರಿಯುತ್ತರ ಮುಂದಿನ ಸಂಚಿಕೆಯಲ್ಲಿ.

೧) ಅಂದು ಮದುವಣಿಗನಾಗ ಬೇಕಿದ್ದ, ಮರೆಯಬಹುದಾಗಿದ್ದ, ರಾಧಾ ಕೃಷ್ಣನು, ತನ್ನ ಇಬ್ಬರು ಗೆಳೆಯರೊಂದಿಗೆ ವಂಡಸೆ ಎಂಬ ಊರಲ್ಲಿ ಬಳಲುತ್ತಿದ್ದಾನೆ. ಆತ, ಗೆಳೆಯ ಸಖಾರಾಮ ಸದಾನಂದ, ಇವರೊಂದಿಗೆ ಯಾವುದೋ ಒಂದು ಅಂಗಡಿಯ ಜಗುಲಿಯಲ್ಲಿ ಕುಳಿತುಕೊಂಡು ತಮ್ಮ ನವೀನ ಪರಿಚಯ ಬೆಳಸುತ್ತಿದ್ದಾನೆ.

೨) ಬೀದಿಯ ಮಾರಿ ಮನೆ ಸೇರಿದ ಮೇಲೆ, ನಿಮಿಷವೂ ತಡಮಾಡದೇ, ಪ್ರತಿಯೊಂದನ್ನೂ ತನ್ನ ಅಧೀನಕ್ಕೆ ತೆಗೆದು ಕೊಂಡಿತು. ಉತ್ತರ ಪಶ್ಚಿಮ ದಕ್ಷಿಣ ಗಳಲ್ಲಿದ್ದ ಕೊಡಗು ಸೇನೆಗಳನ್ನು ಬೋಪು ದಿವಾನನ ಮೂಲಕವೇ ಇಂಗ್ಲೀಷರು ಮಡಕೇರಿಗೆ ಕರೆ ಕಳುಹಿದರು.

೩) ಬಹು ರಹಸ್ಯವೊ ಸೃಷ್ಟಿ, ಬಹುರಹ್ಯಸವೊ ಜೀವ ! ಅಹುದದಲ್ಲ ವಿದೆಂಬ ವಾದ ಬರಿಹರಟೆ !!

೪) ನಮ್ಮೂರು ಕೇಶವಾಚಾರ್ರು ಬಹಳ ವೈದೀಕರು. ಪ್ರತಿ ದಿನವೂ ಹನ್ನೆರಡು ನಾಮ ಹಾಕಿಕೊಳ್ಳುತ್ತಾರೆ. ನಾಮ ಹಾಕಿಕೊಳ್ಳುವುದಕ್ಕೇ ದಿವಸಕ್ಕೆ ಅವರಿಗೆ ಒಂದು ಘಂಟೆ ಕಾಲ ಬೇಕಾಗುತ್ತದೆ. ಮೊದಲ ದಿವಸ ಹಾಕಿ ಕೊಂಡ ನಾಮ ಮಾರನೆಯ ದಿವಸ ಬೆಳಗ್ಗೆ ಕೂಡ ಅಚ್ಚಳಿಯದಂತೆ ಪಟ್ಟೆಪಟ್ಟೆಯಾಗಿ ಇರುತ್ತದೆ. "ಮನುಷ್ಯನ ಆಚಾರ ಕೆಟ್ಟರೂ ಆಕಾರ ಕೆಡಕೂಡದು" ಎಂಬುದೇ ಇವರ ಮುಖ್ಯ ತತ್ವ.

೫) ಅಲ್ವೇ ಮತ್ತೆ ? ಜಾತಿ ನಾಯಿ .. ಹುಂ .. ... ಕೆರೇಲಿ ಶುಭ್ರವಾಗಿ ಸ್ನಾನ ಮಾಡ್ಬಿಟ್ಟು ಸ್ವಾಮಿ ದರ್ಶನ ಮಾಡಿಕೊಂಡ್ ಬರುತ್ತೇನೋ ಈ ಶ್ವಾನ ಮುಂಡೇದು !... ...ಮುಂಜೀ ಗಿಂಜೀ ಯೆನಾದ್ರೂ ಆಗಿದೆಯೇನು ಈ ಮೃಗಕ್ಕೆ ... ಜಾತೀ ನಾಯಿ !!!! ಇದಲ್ದೆ ಇನ್ನೆಷ್ಟು ಜಾತಿ ಮೃಗಗಳಿವೆ ನಿಮ್ಮ ಅರಮನೇಲಿ ?

೬) 'ಚಿಕ್ಕಪ್ಪಾ ಎಂಬ ಶಬ್ಧ ಮೈಕೆಲನ ಕಿವಿಗೆ ಬಿದ್ದಾಗ ಮೈಕೆಲನಿಗೆ ಭೂಮ್ಯಂತರಿಕ್ಷಗಳು ಒಂದಾಗಿ ಬೆರೆತು ಹೋದವು. "ಇದೇನಿದು ! ಇವನು ನನ್ನನ್ನು 'ಚಿಕ್ಕಪ್ಪಾ ಎಂದು ಕರೆಯುತ್ತಾನೆ ! ಈ ಕರೆಯಲ್ಲಿ ಹಿತವಿದೆ, ಸುಖವಿದೆ, ಹಿಂದಿನ ಕರುಳಿನ ಕರೆಯ ಪ್ರತಿಧ್ವನಿ ಇದೆ. ಅರ್ನೆಸ್ಟೊವಿನ ಧ್ವನಿ ಇದ್ದ ಹಾಗೆಯೇ ಇದೆಯಲ್ಲಾ" ಎಂದು ಮೈಕೆಲ್ ಆಶ್ಚರ್ಯ ಭರಿತನಾದನು.

ನಿಮ್ಮ ಬುದ್ಧಿಗೊಂದು ಸವಾಲು

ಫೆಬ್ರವರಿ ಸಮಸ್ಯೆಗೆ ಸರಿಯುತ್ತರ :

ಕುಂಜುಕಟ್ಟಿ
ಉನ್ನಿಯ ನಿಧಿ

ಲೈಟ್ ಹೌಸ್
ಪಿಳ್ಳೈಯ ನಿಧಿ

ಮಹಾಬಲಿ ದೇವಸ್ಥಾನ
ನಾಯರ್ ನಿಧಿ

ಮಾರ್ತಾಂಡ ಗುಡ್ಡ
ವರ್ಮನ ನಿಧಿ

(ಚಂದ್ರುರವರು ಸದ್ಯಕ್ಕೆ ವಿದೇಶ ಪ್ರವಾಸ ಕೈಗೊಂಡಿರುವುದರಿಂದ ಈ ತಿಂಗಳು ಸಮಸ್ಯೆ ನೀಡಲು ಸಾಧ್ಯವಾಗಿಲ್ಲ.

—ಸಂಪಾದಕ.)

Statement about ownership and other particulars about newspaper "APARANJI" to be published in the first issue every year after the last day of February.

FORM IV
(See Rule 8)

1.	Place of Publication	....	Bangalore
2.	Periodicity	—	Monthly
3.	Printer's Name	—	V. R. Nath
	Nationality	—	Indian
	Address	....	404, Sampige Road Malleswaram, Bangalore-560 003
4.	Publisher's Name	....	M. Shivakumar
	Nationality	—	Indian
	Address	....	Aparanji Karyalaya 36, 6th Main Road Malleswaram Bangalore-560 003
5.	Editor's Name	....	M. Shivakumar
	Nationality		Indian
	Address	....	Aparanji Karyalaya 36, 6th Main Road Malleswaram Bangalore-560 003
6.	Name and address of individuals who own the newspaper and partners or share holders holding more than one per cent of the total capital.	....	M. Shivakumar Sole Proprietor Aparanji Karyalaya 36, 6th Main, Malleswaram Bangalore-560 003

I, M. Shivakumar, hereby declare that the particulars given above are true to the best of my knowledge and belief.

22, February 1987

M. SHIVAKUMAR
Publisher

REGISTERED No. BGW-180